ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿ ಮುಖ ಪತ್ರಿಕೆ

ಸಂಪುಟ 8 ಸಂಚಿಕೆ 35 ಆಗಸ್ಟ್ 31, 1986 ಬೆಲೆ 80 ಪೈಸೆ.

ಒಳಗೇನಿದೆ?....

ಹೆಚ್ಚುತ್ತಿರುವ ಮತೀಯ ಗಲಭೆಗಳು–ಅದಕ್ಕೆ ಕಾರಣಗಳು

–ಸಿ. ರಾಮಚಂದ್ರರಾವ್

ಚನ್ನಪಟ್ಟಣ, ಮಾಲೂರು, ಉಳ್ಳಾಲ, ಉಡುಪಿ, ರಾಮನಗರ, ಅಲಂಧ, ಬೆಳ್ತಂಗಡಿ, ಪುನಃ ಚೆನ್ನಪಟ್ಟಣ .... ಮತೀಯ ಗಲಭೆಗಳು .... ಕ್ಷುಲ್ಲಕ ಕಾರಣಗಳು......ತೀವ್ರ ದ್ವೇಷ ಉಲ್ಬಣ, ಮತೀಯ ಬಣಗಳು, ದೊಂಬಿಗಳು, ಕೊಳ್ಳಿ ಇಡುವುದು, ಚೂರಿ ಹಾಕುವುದು....ಸೆಕ್ಷನ್, ಲಾಟಿ ಚಾರ್ಜ್ ಗುಂಡು, ಗುಂಡಿನಿಂದ ಕೆಲವು ಸಾವು .... ಆರೋಪ, ಪ್ರತ್ಯಾರೋಪ ಎಲ್ಲವೂ ತಣ್ಣಗೆ .... ಚುನಾವಣೆಗಳ ಘೋಷಣೆ....ಪುನಃ ಮತೀಯ ಗಲಭೆಗಳಿಗೆ ನಾಂದಿ...

ಇದು ಕರ್ನಾಟಕದಲ್ಲಿ......

ಇದು ದೇಶದ ಎಲ್ಲೆಡೆಗಳಲ್ಲಿ ಪ. ಬಂಗಾಳ, ತ್ರಿಪುರ ಮತ್ತು ಕೇರಳಗಳಲ್ಲಿ ಮಾತ್ರ ಬಹಳ ಅಪರೂಪ

ಯಾಕೆ ಹೀಗಾಗುತ್ತದೆ ಎಂಬುದರ ಕುರಿತು ಎಲ್ಲಾ ವಿಚಾರವಂತರು ಯೋಚಿಸಬೇಕಾದ ಮತ್ತು ನಿರ್ದಿಷ್ಟ ಮತ್ತು ಸ್ಪಷ್ಟ ಅಭಿಪ್ರಾಯಕ್ಕೆ ಬರಬೇಕಾದ ವಿಷಯವಾಗಿದೆ.

ಯಾರ ಕೈವಾಡ ?

ಏನು ಉದ್ದೇಶ ?

ಕರ್ನಾಟಕದಲ್ಲಿ (ಇತರ ಕಡೆಗಳಲ್ಲೂ) ಈ ಗಲಭೆಗಳ ಮತ್ತು ಘಟನೆಗಳ ಹಿಂದೆ ರಾಜಕೀಯ ಕೈವಾಡ ಮತೀಯ ಮೂಲಭೂತವಾದಿಗಳ ಕೈವಾಡವಿದೆ ಎಂಬುದು ನೂರಕ್ಕೆ ನೂರು ಸತ್ಯ

ಮತೀಯ ಮೂಲಭೂತವಾದಿಗಳಿಗೆ ತಮ್ಮದೇ ಆದ ಮತೀಯ ಉದ್ದೇಶವಿದ್ದರೆ, ಇತರರಿಗೆ ಮತೀಯ ಪ್ರಭಾವ ಬೆಳೆಸುವ ಆಸೆ, ರಾಜಕೀಯ ಸೋಲಿನ ಸೇಡು ತೀರಿಸುವ ಆಶೆ....

ಬಂಡವಾಳಶಾಹಿ–ಭೂಮಾಲಕಪರ ಪಕ್ಷಗಳ ಸರ್ಕಾರಗಳಿಗೆ–ಅದು ರಾಜ್ಯಗಳಲ್ಲಾಗಲೀ ಕೇಂದ್ರದಲ್ಲಾಗಲಿ, ಕಾಂಗ್ರೆಸ್ (ಐ) ಸರಕಾರದಲ್ಲಾಗಲಿ, ಜನತಾ ಪಕ್ಷ ಸರಕಾರದಲ್ಲಾಗಲಿ, ಮೂಲೋತ್ಪಾಟನೆ ಇತ್ಯಾದಿ ಇಲ್ಲ ... ಅದನ್ನು ಮೂಲೋಚ್ಚಾಟನೆಮಾಡಲು ಸಾಧ್ಯ ಎಂಬ ಮನೋಭಾವವೂ ಇಲ್ಲ.

ಸ್ಪಷ್ಟವಾಗಿ ನಮ್ಮ ಕರ್ನಾಟಕದಲ್ಲಿ 1983-1984ರ ಹೋರಾಟಗಳಲ್ಲಿ ಕಾಂಗ್ರೆಸ್ಸಿಗರ ಕೈವಾಡ ಇದ್ದರೂ, ಅನಂತರದ ಘಟನೆಗಳಲ್ಲಿ ದ. ಕ. ಜಿಲ್ಲೆಯ ಸಂದರ್ಭಗಳಲ್ಲಂತೂ ಈ ಕೈವಾಡ ಬಿ.ಜೆ.ಪಿ. ಯವರದು ಮತ್ತು ಮತೀಯ ಮೂಲಭೂತವಾದಿಗಳದ್ದು ....ಎಂಬುದರಲ್ಲಿ ಎರಡು ಮಾತಿಲ್ಲ. ಸರಕಾರಕ್ಕೂ ತಿಳಿದಿದೆ.

ಆದರೆ ಕ್ರಮಗಳು ಮಾತ್ರ ಶೂನ್ಯ.

ಘಟನೆಗಳ ಭಗಿಲೆದ್ದಾಗ ಮಾತ್ರ ಆರ್ಭಟ, ಅಲೆದಾಟ, ಮತೀಯ ಸೌಹಾರ್ದ ಸಮಿತಿ ರಚನೆ ಇತ್ಯಾದಿ ಇತ್ಯಾದಿ.

ಕೋಮುಗಲಭೆಗಳು ಹುಟ್ಟುವುದು ಹೇಗೆ ಮತ್ತು ಇವುಗಳನ್ನು ನಿವಾರಿಸುವುದು ಹೇಗೆ?ಕೆಲವು ಸೂಚನೆಗಳನ್ನು ಇಲ್ಲಿಕೊಡುವುದಕ್ಕೆ ಇಚ್ಛಿಸುತ್ತೇವೆ.

8ನೇ ಪುಟ ನೋಡಿ

ಬಂಜರು ಭೂಮಿ ಅಕ್ರಮ ಸಾಗುವಳಿದಾರರ ಪ್ರಶ್ನೆ

ಕಾ. ವೆಂಕಟರಾಮಯ್ಯ ಸಭಾತ್ಯಾಗ

ದಿನಾಂಕ 28-8-86 ರಂದು ವಿಧಾನ ಸಭೆಯಲ್ಲಿ ಜನತಾ ಸರ್ಕಾರ ಬಂಜರು ಭೂಮಿ ಅಕ್ರಮ ಸಾಗುವಳಿದಾರರಿಗೆ ಭೂಮಿಯ ಹಕ್ಕನ್ನು ನೀಡುವುದಕ್ಕೆ ಸಂಬಂಧಿಸಿದ ಭೂ ಕಂದಾಯ ಅಧಿನಿಯಮಕ್ಕೆ ತಿದ್ದುಪಡಿಯನ್ನು ಮಂಡಿಸಿತು. ಆದರೆ ಅದೇ ಸಮಯದಲ್ಲಿ ಅದರಲ್ಲಿ ಬಹಳ ಗಹನವಾದ ಪ್ರಶ್ನೆ ಅಡಗಿದೆಯೆಂದೂ ಆದುದರಿಂದ ಜಂಟಿ ಪರಿಶೀಲಕ ಸಮಿತಿಗೆ ಈ ಮಸೂದೆಯನ್ನು ಒಪ್ಪಿಸಿ ನಂತರವೇ ಅದನ್ನು ಕಾನೂನಾಗಿ ಮಾಡಬೇಕೆಂಬ ವಿಚಿತ್ರ ವಾದವನ್ನು ಹೂಡಿತು.

84ರಲ್ಲಿಯೇ ಎಲ್ಲಾ ಅಕ್ರಮ ಸಾಗುವಳಿ ಭೂಮಿಯನ್ನು ಸಕ್ರಮಗೊಳಿಸುವ ಘೋಷಣೆ ನೀಡಿದ ಜನತಾ ಸರಕಾರ ಈ ಎರಡು ವರ್ಷಗಳ ಸಮಯದಲ್ಲಿ ಇದಕ್ಕೆ ಸಂಬಂಧಿಸಿದ ಎಲ್ಲಾ ಪ್ರಶ್ನೆಗಳನ್ನೂ ಪರಿಶೀಲಿಸದೆ ಏನು ಮಾಡುತ್ತಿತ್ತು ?

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ವಿಧಾನ ಸಭಾ ನಾಯಕರಾದ ಕಾಂ. ಆರ್. ವೆಂಕಟರಾಮಯ್ಯನವರು ಈ ವಿಳಂಬ ತಂತ್ರವನ್ನು ಪ್ರತಿಭಟಿಸಿ ಅಕ್ರಮ ಸಾಗುವಳಿದಾರರನ್ನು ಒಕ್ಕಲೆಬ್ಬಿಸುವುದು, ದಂಡದಗಳನ್ನು ಹಾಕುವುದು, ಅರಣ್ಯ ಭೂಮಿ ಮುಂತಾದ ಹೆಸರಿನಲ್ಲಿ ಅವರ ಭೂಮಿಯನ್ನು ಕಿತ್ತುಕೊಳ್ಳುವುದು ಮೊದಲಾದುವು ವ್ಯಾಪಕವಾಗಿ ನಡೆಯುತ್ತಿದೆ. ಆದುದರಿಂದ ಈ ಮಸೂದೆಯನ್ನು ಕೂಡಲೇ ಕಾನೂನಾಗಿ ಒಪ್ಪಿ ಜಾರಿಗೆ ತರಬೇಕೆಂದು ಒತ್ತಾಯಿಸಿದರು. ಭೂಮಾಲಕ–ಬಂಡವಾಳಶಾಹಿ ಜನತಾ ಪಕ್ಷದ ಕಂದಾಯ ಮಂತ್ರಿಯವರು ಇದನ್ನು ಒಕ್ಕಡೆ ಜಂಟಿ ಪರಿಶೀಲಕ ಸಮಿತಿಗೆ ಒಪ್ಪಿಸಿ ಮುಂದಿನ ಅಧಿವೇಶನದಲ್ಲಿ ಕಾನೂನಾಗಿ ಮಾಡುತ್ತೇವೆಂಬ ವಿಳಂಬತಂತ್ರವನ್ನೇ ಪಟ್ಟುಹಿಡಿದಾಗ ಇದನ್ನು ವಿರೋಧಿಸಿ ಸಭಾ ತ್ಯಾಗ ಮಾಡಿದರು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ನಿರ್ಣಯ

ಸೆ.–29 'ವಿಧಾನ ಸೌಧ ಚಲೋ'

ಕರ್ನಾಟಕ ಪ್ರಾಂತ ರೈತ ಸಂಘವು, 1986 ಏಪ್ರಿಲ್‌ನಲ್ಲಿ ನಡೆದ ರಾಯಚೂರು ಸಮ್ಮೇಳನದಲ್ಲಿ ರಾಜ್ಯದ ರೈತರ ಮುಖ್ಯ ಬೇಡಿಕೆಗಳನ್ನು ಗುರ್ತಿಸಿ ಅವುಗಳನ್ನು ಒಂದು ಮನವಿಯ ಮೂಲಕ ರಾಜ್ಯದ ಮುಖ್ಯಮಂತ್ರಿಯವರಿಗೆ ಅವರು ಆಸ್ಪತ್ರೆಯಲ್ಲಿದ್ದಾಗ ಜೂನ್ 24ರಂದು ಸಲ್ಲಿಸಲಾಗಿತ್ತು. ಬಹಳ ಕಾಲದವರೆಗೂ ರಾಜ್ಯ ಸರ್ಕಾರವು ಈ ಬೇಡಿಕೆಗಳ ಬಗ್ಗೆ ಗಮನ ಹರಿಸದಿದ್ದುದನ್ನು ಕಂಡು ರಾಜ್ಯ ಸಮಿತಿಯು ಆಗಸ್ಟ್ 1ರಂದು ರಾಜ್ಯಾದ್ಯಂತ ಎಲ್ಲಾ ಜಿಲ್ಲೆ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಪ್ರದರ್ಶನ, ಧರಣಿಗಳನ್ನು ನಡೆಸಿ ಸಂಬಂಧಪಟ್ಟ ಅಧಿಕಾರಿಗಳ ಮುಖಾಂತರ ಮುಖ್ಯಮಂತ್ರಿಯವರಿಗೆ ಒತ್ತಾಯಿಸಲು ಪುನರ್ ಮನವಿಗಳನ್ನು ಸಲ್ಲಿಸಲಾಗಿದೆ.

ರೈತ ಸಮಸ್ಯೆಗಳು ಉಲ್ಬಣವಾಗುತ್ತಿವೆ. ರಾಜ್ಯ ಸರ್ಕಾರ ಕೆಲವು ಪರಿಹಾರಗಳನ್ನು ನೀಡಿದ್ದರೂ ಅವು ರೈತರ ಪ್ರಮುಖ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ವಿಫಲವಾಗಿವೆ ಎಂದು ರೈತರಿಗೆ ಮನವರಿಕೆಯಾಗುತ್ತಿದೆ. ಅವರ ಅತೃಪ್ತಿ ಬೆಳೆಯುತ್ತಿದೆ.

ಜನತಾ ಪಕ್ಷದ ಹಲವಾರು ಆಶ್ವಾಸನೆಗಳು ಪೊಳ್ಳಾಗಿವೆ, ದರಕಾಸ್ತುದಾರರಿಗೆ ಭೂಮಿಯನ್ನು ಖಾಯಂ ಮಾಡುವ ಬದಲು ಕಿತ್ತು ಹಾಕಲಾಗುತ್ತಿದೆ. ಸಾಗುವಳಿ ಮಾಡುತ್ತಿರುವ ಅರಣ್ಯ ಭೂಮಿಯಲ್ಲಿ ಸಾಮಾಜಿಕ ಅರಣ್ಯ ಬೆಳೆಸುವ ನೆಪದಲ್ಲಿ ಭೂಮಿಯಿಂದ ಹೊರಹಾಕಲಾಗುತ್ತಿದೆ. ಹಸಿರು ಕಾರ್ಡಿನ ಪರಿಸ್ಥಿತಿ ಹೆಚ್ಚೇನು ಸುಧಾರಣೆಯಾಗಿಲ್ಲ.

ಕನಿಷ್ಟ ಕೂಲಿ, ಸಾಲದ ಪ್ರಶ್ನೆ, ವಸತಿ ಪ್ರಶ್ನೆ, ಬೀಜ ಕ್ರಿಮಿನಾಶಕದ ಪ್ರಶ್ನೆಗಳು ಹಾಗೆಯೇ ಉಳಿದಿವೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸಮಿತಿ ಆಗಸ್ಟ್ ಒಂದರಂದು ರಾಜ್ಯ ಸರ್ಕಾರಕ್ಕೆ ಎಚ್ಚರಿಸಲು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಧರಣಿ ಪ್ರದರ್ಶನ ಮುಖಾಂತರ ಮರು ಮನವಿಗಳನ್ನು ಕಳಿಸಲಾಗಿದ್ದರೂ ಪ್ರಯೋಜನವಾಗಿಲ್ಲ, ಕಾರಣ ಸೆಪ್ಟೆಂಬರ್ 29 ರಂದು ರಾಜ್ಯದ ರೈತರು ರಾಜಧಾನಿಗೆ ಧಾವಿಸುತ್ತಿದ್ದಾರೆಂದು, ಸರ್ಕಾರಕ್ಕೆ ಕರ್ನಾಟಕ ಪ್ರಾಂತ ರೈತ ಸಂಘ ಎಚ್ಚರಿಸುತ್ತಿದೆ. ಆಗಸ್ಟ್ 17 ರಿಂದ 21ರ ವರೆಗೆ ರಾಜ್ಯ ಮಟ್ಟದ 100 ಜನ ಮುಖಂಡರ ಶಾಲೆಯನ್ನು ತಲಘಟ್ಟಪುರದಲ್ಲಿ ಈ ಕುರಿತು ನಡೆಸಲಾಗಿದ್ದು ಆಗಸ್ಟ್ 21 ರಂದು ರಾಜ್ಯ ಸಮಿತಿ ಸಭೆ ನಡೆದು ಎರಡನೇ ಹಂತದ ಹೋರಾಟವಾಗಿ ರಾಜಧಾನಿ ಚಲೋ ಕಾರ್ಯಕ್ರಮಕ್ಕೆ ಕರೆ ಕೊಡಲಾಗಿದೆ.

'ಗೂರ್ಖಾಲ್ಯಾಂಡ್' ಚಳುವಳಿ-ಕಾಂಗ್ರೆಸ್(ಐ)ನ ಸಂದರ್ಭ ಸಾಧಕತನ

ದೇಶದ ಹಲವೆಡೆ ಭುಗಿಲೆದ್ದಿರುವ ಪ್ರತ್ಯೇಕತಾವಾದಿ ಚಳುವಳಿಗಳಲ್ಲಿ ಕಾಂಗ್ರೆಸ್ (ಐ) ಪಕ್ಷ ಸಮಯ ಸಾಧಕ ನಿಲುವೊಯನ್ನು ತಳೆದು ದೇಶದ ಐಕ್ಯತೆಗೆ ಭಂಗ ತರಲು ನೆರವಾಗುತ್ತಿದೆ. ಕಾಂಗ್ರೆಸ್ (ಐ)ನ ಈ ಆತ್ಮಘಾತಕ ನೀತಿ ಪ. ಬಂಗಾಳದ ಡಾರ್ಜಿಲಿಂಗ್ ಜಿಲ್ಲೆಯಲ್ಲಿ ಕಾಣಿಸಿಕೊಂಡಿರುವ 'ಗೂರ್ಖಾಲ್ಯಾಂಡ್' ಚಳುವಳಿಯಲ್ಲೂ ಸ್ಪಷ್ಟವಾಗಿ ವ್ಯಕ್ತವಾಗುತ್ತಿದೆ.

ಈ ಗೂರ್ಖಾಲ್ಯಾಂಡ್ ಚಳುವಳಿಯ ಮುಖಂಡನಾಗಿರುವ ಸುಭಾಸ್ ಗೈಶಿಂಗ್ ಆಗಸ್ಟ್ ಹದಿನೈದರ ಸ್ವಾತಂತ್ರ್ಯ ದಿನಾಚರಣೆಯನ್ನು ಕಪ್ಪು ದಿನವಾಗಿ ಆಚರಿಸಬೇಕೆಂದೂ ಪ್ರತ್ಯೇಕ ಗೂರ್ಖಾರಾಜ್ಯದ ನಿರ್ಮಾಣಕ್ಕಾಗಿ ಚಳುವಳಿಯನ್ನು ಅಂದಿನಿಂದ ಪ್ರಾರಂಭಿಸುವುದಾಗಿಯೂ ಹೇಳಿಕೊಂಡಿದ್ದ. ಆದರೆ ಇದಕ್ಕೆ ಕೆಲವೇ ದಿನಗಳ ಮೊದಲು ಆತ ನವದೆಹಲಿಗೆ ಭೇಟಿ ನೀಡಿ ಕಾಂಗ್ರೆಸ್ ಮತ್ತು ಕಮ್ಯೂನಿಸ್ಟ್ ಪಕ್ಷಗಳನ್ನು ಬಿಟ್ಟು ಉಳಿದ ವಿರೋಧ ಪಕ್ಷಗಳ ನಾಯಕರನ್ನು ಭೇಟಿಯಾಗಿದ್ದೆನೆಂದು ಹೇಳಿದ್ದಾನೆ ಆದರೆ ಕಾಂಗ್ರೆಸ್ಸೇತರ ವಿರೋಧ ಪಕ್ಷಗಳ ಮುಖಂಡರು ಇದನ್ನು ಅಲ್ಲಗಳೆದಿದ್ದಾರೆ. ಆತ ಕೇಂದ್ರ ಸರ್ಕಾರದ ಕೆಲವು ಪ್ರಭಾವಶಾಲಿ ವ್ಯಕ್ತಿಗಳನ್ನು ಭೇಟಿಯಾಗಿದ್ದನೆಂದು ಶಂಕಿಸಬಹುದು. ಈ ವ್ಯಕ್ತಿಗಳು ಚಳುವಳಿಯನ್ನು ಮುಂದೂಡಬೇಕೆಂದೂ ಸ್ವಾತಂತ್ರ್ಯ ದಿನಾಚರಣೆಯನ್ನು ಬಹಿಷ್ಕರಿಸಕೂಡದೆಂದೂ ಆತನಿಗೆ ಕಿವಿಮಾತು ಹೇಳಿರುವ ಸಾಧ್ಯತೆ ಇದೆ. ಗೂರ್ಖಾಲ್ಯಾಂಡ್ ಚಳುವಳಿಯ ಕುರಿತು ಸರಕಾರದ ವಕ್ತಾರರು ಏನಾದರೂ ಆಶ್ವಾಸನೆ ನೀಡಿರಲೂಬಹುದು. ಈ ಮಾತುಗಳ ಸತ್ಯಾಸತ್ಯತೆಯನ್ನು ಭವಿಷ್ಯವೇ ಹೇಳಬಲ್ಲದು. ಆದರೆ ನವದೆಹಲಿ ಭೇಟಿಯ ನಂತರ ಸುಭಾಷ್ ಗೈಶಿಂಗ್ ತನ್ನ ಚಳುವಳಿಯನ್ನು ಇನ್ನೂ ಒಂದು ತಿಂಗಳು ಮುಂದೂಡುವ ನಿರ್ಧಾರ ಪ್ರಕಟಿಸಿದ್ದಾನೆ. ಡಾರ್ಜಿಲಿಂಗ್‌ನಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಶಾಂತವಾಗಿ ನಡೆದಿದೆ. ಬಹುಶಃ ರಾಜೀವ ಗಾಂಧಿ ಸರ್ಕಾರವು ವಿಜೋರಂಗೆ ಕೋರ ಲಾಲ್ಡೆಂಗನೊಂದಿಗೆ ಒಪ್ಪಂದ ಮಾಡಿಕೊಂಡಂತೆ ಗೈಶಿಂಗ್ ಜೊತೆಗೂ ಒಂದು ಒಪ್ಪಂದ ಮಾಡಿಕೊಳ್ಳಬಹುದೇ ?

ಡಾರ್ಜಿಲಿಂಗ್‌ನ ನೇಪಾಳಿ ಜನರಲ್ಲಿ ಅಲ್ಲಸಲ್ಲದ ಸಂದೇಹಗಳನ್ನು ಸೃಷ್ಟಿಸಿ ಅದನ್ನು ಪ್ರತ್ಯೇಕವಾದಿ ಚಳುವಳಿಗಾಗಿ ಬಳಸಲಾಗುತ್ತಿರುವುದನ್ನು ತಡೆಯಲು ಕೇಂದ್ರ ಸರ್ಕಾರ ಮಾಡಬೇಕಾದುದು ಇಷ್ಟೇ, ಮೊದಲನೆಯದಾಗಿ ಈ ಚಳುವಳಿ ಪ್ರತ್ಯೇಕತಾವಾದಿ ಚಳುವಳಿಯೆಂಬುದನ್ನು ಸ್ಪಷ್ಟವಾಗಿ ಸಾರಿ ಅದನ್ನು ಖಂಡಿಸಬೇಕಾಗಿತ್ತು. ಎರಡನೆಯದಾಗಿ ಭಾರತ-ನೇಪಾಳ ಒಪ್ಪಂದವು ಭಾರತದಲ್ಲಿರುವ ನೇಪಾಳಿ ಜನತೆಯ ಪೌರ ಹಕ್ಕುಗಳನ್ನು ಮೊಟಕು ಮಾಡುವುದಿಲ್ಲವೆಂಬ ಸ್ಪಷ್ಟೀಕರಣ ನೀಡಬೇಕಾಗಿತ್ತು. ನೇಪಾಳಿ ಜನರ ವಿಶಿಷ್ಟ ಸಂಸ್ಕೃತಿಯ ಉಳಿವಿಗಾಗಿ ನೇಪಾಳಿ ಭಾಷೆಯನ್ನು ಸಂವಿಧಾನದ ಎಂಟನೇ ಶೆಡ್ಯೂಲಿನಲ್ಲಿ ಸೇರಿಸಬೇಕು. ಕೇಂದ್ರ ಸರ್ಕಾರ ಇದರಲ್ಲಿ ಏನನ್ನೂ ಮಾಡುತ್ತಿಲ್ಲ. ರಾಜೀವಗಾಂಧಿ ಎಲ್ಲ ಬಗೆಯ ಪ್ರತ್ಯೇಕತಾವಾದಿ ಚಳುವಳಿಗಳನ್ನೂ ತಾನು ವಿರೋಧಿಸುತ್ತಿರುವುದಾಗಿ ಘೋರಣೆಯ ಮಾತಾಡಿದ್ದಾರೆಯೇ ಹೊರತು 'ಗೂರ್ಖಾಲ್ಯಾಂಡ್' ಚಳುವಳಿಯೊಂದು ಪ್ರತ್ಯೇಕತಾವಾದಿ ಚಳುವಳಿಯೆಂದು ಸ್ಪಷ್ಟವಾಗಿ ಹೇಳುತ್ತಿಲ್ಲ. ಬೂಟಾಸಿಂಗ್ ಹಾಗೂ ಕಾಂಗ್ರೆಸ್‌ನ ಉಪಾಧ್ಯಕ್ಷ ಅರ್ಜುನ್ ಸಿಂಗ್ ಕೂಡ 'ಗೂರ್ಖಾಲ್ಯಾಂಡ್' ಭಾರತದ ಸಂವಿಧಾನದ ಚೌಕಟ್ಟಿನೊಳಗೇ ಪ್ರತ್ಯೇಕ ರಾಜ್ಯ ನಿರ್ಮಾಣಕ್ಕಾಗಿ ನಡೆಯುತ್ತಿರುವ ಚಳುವಳಿಯೆಂದು ಅದಕ್ಕೆ ಸರ್ಟಿಫಿಕೇಟ್ ನೀಡಿದ್ದಾರೆ. ಈ ಮಹಾಶಯರುಗಳಿಗೆ 'ಗೂರ್ಖಾಲ್ಯಾಂಡ್' ಚಳುವಳಿಯ ಕುರಿತು ಈ ಕೆಳಗಿನ ವಿಚಾರಗಳು ಗೊತ್ತಿಲ್ಲವೆ ?

1) ಗೂರ್ಖಾಲ್ಯಾಂಡ್‌ಗೆ ಪ್ರತ್ಯೇಕ ರಾಷ್ಟ್ರದ ಸ್ಥಾನಮಾನ ನೀಡಬೇಕೆಂದು ಸುಭಾಷ್ ಗೈಶಿಂಗ್ ಈಗಾಗಲೇ ಸಂಯುಕ್ತ ರಾಷ್ಟ್ರ ಸಂಘಕ್ಕೆ ಪತ್ರ ಬರೆದಿದ್ದಾನೆ.

2) ಗೂರ್ಖಾಲ್ಯಾಂಡನ್ನು ಪ್ರತ್ಯೇಕ ರಾಷ್ಟ್ರವಾಗಿ ಪರಿಗಣಿಸಬೇಕೆಂದು ಆತ ಪಾಕಿಸ್ತಾನ, ಇಂಗ್ಲೆಂಡ್ ಮತ್ತು ಅಮೆರಿಕಾಕ್ಕೂ ಪತ್ರ ಬರೆದಿದ್ದಾನೆ.

3) ಸೈನ್ಯ ಮತ್ತು ಪೋಲೀಸ್ ಪಡೆಯಲ್ಲಿರುವ ನೇಪಾಳಿ ಮೂಲದ ಜನರು ನಾಗರಿಕ ಆಡಳಿತೆಯ ಆಜ್ಞೆಗಳನ್ನು ಒಪ್ಪಬಾರದೆಂದೂ ಅವರು ಪ್ರತ್ಯೇಕ ಗೂರ್ಖಾರಾಷ್ಟ್ರದ ನಿರ್ಮಾಣಕ್ಕಾಗಿ ಜೀವತೊರೆಯಲು ಸಿದ್ಧರಾಗಬೇಕೆಂದೂ ಕರೆ ನೀಡುವ ಕರಪತ್ರಗಳನ್ನು ಡಾರ್ಜಿಲಿಂಗ್‌ನಲ್ಲಿ ವ್ಯಾಪಕವಾಗಿ ಹಂಚಲಾಗಿದೆ.

4) ಗೂರ್ಖಾರಾಷ್ಟ್ರ ನಿರ್ಮಾಣಕ್ಕಾಗಿ ಸಶಸ್ತ್ರ ಹೋರಾಟ ನಡೆಸಬೇಕೆಂದು ಉದ್ರೇಕಕಾರಿ ಕರೆ ನೀಡಿ ಗೈಶಿಂಗ್ ಮತ್ತು ಆತನ ಹಿಂಬಾಲಕರು ಮಾಡಿರುವ ಭಾಷಣದ ಟೇಪ್ ಮತ್ತು ಕ್ಯಾಸೆಟ್‌ಗಳನ್ನು ಪಶ್ಚಿಮ ಬಂಗಾಳ ಸರ್ಕಾರ ಈಗಾಗಲೇ ಕೇಂದ್ರ ಸರ್ಕಾರಕ್ಕೆ ನೀಡಿದೆ.

5) ಜಿ. ಎನ್. ಎಲ್. ಎಫ್. ಗೆ ನೇಪಾಳದಲ್ಲಿರುವ ಅಮೇರಿಕಾ ಮತ್ತು ಪಾಕಿಸ್ತಾನದ ರಾಯಭಾರಿ ಕಚೇರಿಗಳ ಜೊತೆಗೆ ಸಂಬಂಧವಿದೆ ಮತ್ತು ಈ ಮೂಲಗಳಿಂದ ಚಳುವಳಿಗಾರರಿಗೆ ಸಾಕಷ್ಟು ಧನಸಹಾಯ ದೊರೆತಿದೆ.

6) ಡಾರ್ಜಿಲಿಂಗ್ ಬೆಟ್ಟ ಪ್ರದೇಶವನ್ನು ಒಳಗೊಂಡಂತೆ ತೀಸ್ತಾ ಪ್ರದೇಶ ಮತ್ತು ತೀಸ್ತಾ ನದಿ ವಲಯದ ಬಯಲು ಸೀಮೆಯ ಹೆಚ್ಚಿನ ಭಾಗ ನೇಪಾಳಕ್ಕೆ ಸೇರಬೇಕೆಂದು ಸುಭಾಷ್ ಗೈಶಿಂಗ್ 1983ರಲ್ಲೇ ಸಲಹೆ ಮಾಡಿದ್ದ.

ಈ ಎಲ್ಲ ಅಂಶಗಳನ್ನು ಗಮನಿಸಿದ ಮೇಲೂ ಗೂರ್ಖಾಲ್ಯಾಂಡ್ ಚಳುವಳಿಯ ಉದ್ದೇಶ ಏನೆಂಬುದು ಕಾಂಗ್ರೆಸ್ (ಐ)ನವರಿಗೆ ಗೊತ್ತಾಗಿಲ್ಲವೆ ? ಕಾಂಗ್ರೆಸ್ (ಐ) ಕದಡಿದ ನೀರಿನಲ್ಲಿ ಮೀನು ಹಿಡಿಯುವ ಕೆಲಸ ಮಾಡುತ್ತಿದೆ. ಗೂರ್ಖಾ ಚಳುವಳಿ ಪ. ಬಂಗಾಳ ಸರಕಾರಕ್ಕೆ ಸಾಕಷ್ಟು ಕಿರುಕುಳವುಂಟು ಮಾಡುತ್ತಿರುವುದು ಕಾಂಗ್ರೆಸ್ (ಐ)ನ ಸಮಯ ಸಾಧಕರಿಗೆ ಖುಶಿಯುಂಟುಮಾಡಿದೆ. ಈಶಾನ್ಯ ಕಲ್ಕತ್ತಾಕ್ಕೆ ಸೇರಿದ ಈ ಕಾಂಗ್ರೆಸ್ (ಐ) ಲೋಕಸಭಾಸದಸ್ಯ, ಅಜಿತ್ ಪಂಜಾ ಡಾರ್ಜಿಲಿಂಗ್‌ನ ಗುಡ್ಡಗಾಡು ಪ್ರದೇಶಕ್ಕಾಗಿ ಮೀಸಲಾಗಿದ್ದ ಹಣವನ್ನು ಪ. ಬಂಗಾಳ ಸರ್ಕಾರ ಬಯಲು ಸೀಮೆಗಾಗಿ ಬಳಸಿಕೊಂಡಿದೆಯೆಂಬ ಸುಳ್ಳು ಅಪವಾದ ಹೊರಿಸಿ ಪರಿಸ್ಥಿತಿ ಇನ್ನಷ್ಟು ಉಲ್ಬಣಗೊಳ್ಳುವಂತೆ ಮಾಡುತ್ತಿದ್ದಾರೆ. ಪಂಜಾಬಿನ ರಾಜ್ಯಪಾಲ ಸಿದ್ಧಾರ್ಥ ಶಂಕರರಾಯ್ ಡಾರ್ಜಿಲಿಂಗ್‌ನ ನೇಪಾಳಿಗಳ ಬೇಡಿಕೆ ನ್ಯಾಯಬದ್ಧವಾದದ್ದು ಎನ್ನುತ್ತಿದ್ದಾರೆ ! ಕಾಂಗ್ರೆಸ್ (ಐ)ನ ಡಾರ್ಜಿಲಿಂಗ್ ಘಟಕವಂತೂ ಜಿ.ಎನ್.ಎಲ್. ಎಫ್. ಜೊತೆಗೆ ಹೆಚ್ಚು ಕಡಿಮೆ ಸಂಪೂರ್ಣ ವಿಲಯನ ಹೊಂದಿ ಚಳುವಳಿಯನ್ನು ಬೆಳೆಸುತ್ತಿದೆ. ತಮ್ಮ ಈ ಸಮಯ ಸಾಧಕತನದ ಮೂಲಕ ಈ ಜನ ದೇಶದ ಐಕ್ಯತೆಯನ್ನು ಕಾಪಾಡುತ್ತಿದ್ದಾರೆಯೆ ?

ಸುದ್ದಿ-ಸಮಾಚಾರ ವಿವಿಧ ರಾಜ್ಯಗಳಿಂದ

ಅಸ್ಸಾಂ: ಅಲ್ಪಸಂಖ್ಯಾತರ ಮೇಲೆ ಪೋಲೀಸ್ ದೌರ್ಜನ್ಯ

ಅಸ್ಸಾಮಿನಲ್ಲಿ ಆಡಳಿತ ನಡೆಸುತ್ತಿರುವ ಎ.ಜಿ.ಪಿ. ಸರ್ಕಾರ ರಾಜ್ಯದ ಅಲ್ಪಸಂಖ್ಯಾತರು ಮತ್ತು ನಿರುದ್ಯೋಗಿ ಯುವಕರ ಮೇಲೆ ಅಮಾನುಷ ದೌರ್ಜನ್ಯ ನಡೆಸುತ್ತಿದೆ. ಕೆಲವೇ ತಿಂಗಳುಗಳ ಹಿಂದೆ ಅಸ್ಸಾಮಿನ ನಿರುದ್ಯೋಗಿ ಯುವಕರ ಹತಾಶೆಯನ್ನು ದುರುಪಯೋಗ ಪಡಿಸಿಕೊಂಡು ಹಿಂಸಾತ್ಮಕ ಚಳುವಳಿ ನಡೆಸಿ ಅಧಿಕಾರಕ್ಕೆ ಬಂದ ಎ.ಜಿ.ಪಿ. ಇದೀಗ ಅದೇ ನಿರುದ್ಯೋಗಿಗಳ ಬೇಡಿಕೆಗಳನ್ನು ಪೂರೈಸಲಾಗದೆ ಅವರನ್ನು ಗುಂಡೇಟು ಮತ್ತು ಲಾಠಿಪ್ರಹಾರದ ಮೂಲಕ ಹಿಂಸಾತ್ಮಕವಾಗಿ ಹತ್ತಿಕ್ಕುತ್ತಿದೆ.

ಜುಲೈ 19ರಂದು ಅಸ್ಸಾಮಿನ ಧುಬ್ರಿ ಜಿಲ್ಲೆಯ ಬಾಗ್ರಿಬಾರಿ ಪ್ರದೇಶದಲ್ಲಿ ಅರಣ್ಯ ಇಲಾಖೆಯ ಕೆಲವು ಸಣ್ಣಪುಟ್ಟ ಹುದ್ದೆಗಳಿಗಾಗಿ ಸುಮಾರು ಐದು ಸಾವಿರ ಮಂದಿ ಅರ್ಜಿ ಸಲ್ಲಿಸಿ ಮೌಖಿಕ ಸಂದರ್ಶನಕ್ಕಾಗಿ ಬಂದಿದ್ದವರು ಈ ಯುವಕರಿಗೆ ಅರಣ್ಯ ಇಲಾಖೆಯಲ್ಲಿ ದುಡಿಯುವುದಕ್ಕೆ ಶಾರೀರಿಕ ಅರ್ಹತೆ ಇರುವುದೇ ಎನ್ನುವುದನ್ನು ಪರೀಕ್ಷಿಸಲು ಅವರು 32 ಕಿಲೋಮೀಟರ್ ದೂರ ಓಡುವಂತೆ ಆಜ್ಞಾಪಿಸಲಾಯಿತು. ಈ ಮ್ಯಾರಥಾನ್ ಓಟಕ್ಕಾಗಿ ಯಾವುದೇ ಏರ್ಪಾಟನ್ನೂ ಮಾಡಲಾಗಿರಲಿಲ್ಲ. ಐದು ಸಾವಿರ ಮಂದಿ ಸಂದರ್ಶನಕ್ಕೆ ಬಂದರೆ ಅಂತಹ ಪರಿಸ್ಥಿತಿಯನ್ನು ಹೇಗೆ ನಿಭಾಯಿಸಬೇಕೆಂದು ಅಧಿಕಾರಿಗಳೂ ಮುಂಚಿತವಾಗಿ ಯೋಚಿಸಿರಲಿಲ್ಲ. ಈ ಸಂದರ್ಶನದ ಅವ್ಯವಸ್ಥೆಯಿಂದ ನೊಂದ ಯುವಕರು ಗದ್ದಲ ಮಾಡಲಾರಂಭಿಸಿದಾಗ ಅವರನ್ನು ಚದುರಿಸಲು ಲಾಠಿಪ್ರಹಾರ-ಅಶ್ರುವಾಯು ಪ್ರಯೋಗ ಮತ್ತು ಕೊನೆಗೆ ಗೋಲಿಬಾರ್ ಮಾಡಲಾಯಿತು. ಗುಂಡೇಟಿನಿಂದ ಪಕ್ಕದ ಹಳ್ಳಿಯ ಒಬ್ಬ ಪ್ರಯಾಣಿಕ ಸ್ಥಳದಲ್ಲೇ ಅಸುನೀಗಿದ. ಈ ಜನರಲ್ಲಿ ಹಲವರು ಎ.ಜಿ.ಪಿ. ಯ ಬೆಂಬಲಿಗರೆ !

ಅಸ್ಸಾಮಿ ಭಾಷೆಯನ್ನು ಬಲವಂತವಾಗಿ ಹೇರುವುದರ ವಿರುದ್ಧ ಪ್ರತಿಭಟಿಸುತ್ತಿದ್ದ ಬಂಗಾಲಿ ಭಾಷಿಕ ವಿದ್ಯಾರ್ಥಿಗಳ ಮೇಲೆ ಅವರಿಗಿಂತಲೂ ಅಧಿಕ ಸಂಖ್ಯೆಯಲ್ಲಿದ್ದ ಪೋಲಿಸರು ಘರ್ಷಣೆ ನಡೆಸಿ ವಿನಾಕಾರಣ ಗೋಲಿಬಾರ್ ಮಾಡಿದುದರಿಂದ ನಾಲ್ಕಾರು ಜನ ಸ್ಥಳದಲ್ಲೇ ಮೃತಪಟ್ಟರು. ಇವರಲ್ಲಿ ಮಫ್ತಿಯಲ್ಲಿದ್ದ ಒಬ್ಬ ಪೋಲೀಸ್ ಕೂಡಾ ಸೇರಿದ್ದಾನೆ. ಈ ಹತ್ಯಾಕಾಂಡದಿಂದ ಉದ್ರೇಕಿತರಾದ ಸ್ಥಳೀಯ ಜನ ಗುಂಪುಗೂಡಿ ಬಂದು ಇಬ್ಬರು ಪೋಲೀಸರನ್ನು ಸಾಯಿಸಿದರು. ಎರಡು ದಿನಗಳ ಕಾಲ ಕರ್ಫ್ಯೂ ಜಾರಿಗೊಳಿಸಿ ಮನೆಮನೆಯನ್ನೂ ಹೊಕ್ಕು ಹೇಳಲಾರದ ದೌರ್ಜನ್ಯ ನಡೆಸಿದರು. ಪ್ರತಿಭಟಿಸಿದವರನ್ನು ಸಾಯುವಂತೆ ಹೊಡೆದು ಪಾತ್ರೆ, ಮತ್ತು ಕುರ್ಚಿ-ಮೇಜುಗಳನ್ನು ಹಾಳುಗೆಡವಿ-ಹೆಂಗಸರ ಮಾನ ಕಳೆದು ಸಾಕಷ್ಟು ರಂಪಾಟ ನಡೆಸಿದ ಪೋಲಿಸರು ಅಧಿಕ ಸಂಖ್ಯೆಯ ಜನರನ್ನು ದಸ್ತಗಿರಿ ಮಾಡಿ ಹಿಂಸಿಸಿದರು.

ಅಲ್ಪಸಂಖ್ಯಾತರು ಏನೇ ಚಳುವಳಿ ಮಾಡಿದರೂ ಅದನ್ನು ಬಗ್ಗು ಬಡೆಯಬೇಕೆಂಬ ಪೂರ್ವಯೋಜಿತ ನಿರ್ಧಾರದಂತೆ ಈ ಹಿಂಸಾಕಾಂಡ ನಡೆಸಲಾಯಿತೆಂದು ತಿಳಿದು ಬಂದಿದೆ. ಸಿ. ಪಿ. ಐ. (ಎಂ)ನ ಅಸ್ಸಾಮ್ ರಾಜ್ಯ ಸಮಿತಿ ಈ ಅಮಾನುಷ ದೌರ್ಜನ್ಯವನ್ನೂ ಕಾರಣವಿಲ್ಲದೆ ಗೋಲಿಬಾರ್ ನಡೆಸಿದುದನ್ನೂ ಖಂಡಿಸಿದೆಯಲ್ಲದೆ ಸತ್ತವರ ಕುಟುಂಬಗಳಿಗೂ ನೊಂದವರಿಗೂ ಸೂಕ್ತ ಪರಿಹಾರ ನೀಡಬೇಕೆಂದು ಆಗ್ರಹಿಸಿದೆ

ಕಾಮ್ರೇಡ್ ಕೃಷ್ಣಪಿಳ್ಳೆಯವರನ್ನು ನೆನೆಸೋಣ

ಕಮ್ಯೂನಿಸ್ಟ್ ಪಕ್ಷ ಕಟ್ಟುವುದರಲ್ಲಿ, ರೈತ–ಕಾರ್ಮಿಕರ ಚಳುವಳಿಗೆ ನೇತೃತ್ವ ನೀಡುವುದರಲ್ಲಿ, ತ್ಯಾಗ ಬಲಿದಾನದಲ್ಲಿ ಎ. ಕೆ. ಗೋಪಾಲನ್, ಪಿ. ಸುಂದರಯ್ಯನವರ ಜೀವನ ಚರಿತ್ರೆಯನ್ನು ಇತ್ತೀಚೆಗೆ ಪಕ್ಷ ಸೇರಿದ ಸಂಗಾತಿಗಳು ಮನನ ಮಾಡಿದ್ದಾರೆ. ನೆನಪಿಟ್ಟುಕೊಂಡಿದ್ದಾರೆಂದು ಭಾವಿಸುತ್ತೇನೆ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಯುತ್ತಿದ್ದ ಆ ಕಾಲದಲ್ಲಿ ದೇಶಾದ್ಯಂತ ಕಮ್ಯೂನಿಸ್ಟ್ ಪಕ್ಷವಿನ್ನೂ ಸುಸಂಘಟಿತವಾಗಿ ಬೆಳೆದು ಬಾರದಿದ್ದ ಸಮಯದಲ್ಲಿ ಕೇರಳದಲ್ಲಿ ಕಮ್ಯೂನಿಸ್ಟ್ ಪಕ್ಷ ಕಟ್ಟಿ, ಪ್ರಬಲವಾದ ರೈತ ಸಂಘಟನೆ ಬೆಳೆಸಿ, ಪರಿಣಾಮಕಾರಿಯಾದ ಚಳುವಳಿ ನಡೆಸುವುದರಲ್ಲಿ ಮೂರ್ತಸ್ವರೂಪರಾಗಿದ್ದ ಕೃಷ್ಣಪಿಳ್ಳೆಯವರ ಹೆಸರು ಕೇಳಿದವರು ಕೆಲವೇ ಜನ ಇರಬಹುದಷ್ಟೆ. ಆದರೆ ಕೇರಳದಲ್ಲಿ ಮಾತ್ರ ಈ ಹೊತ್ತಿಗೂ ಕೃಷ್ಣಪಿಳ್ಳೆಯವರ ಹೆಸರು ಮನೆಮಾತಾಗಿ ಚಿರಸ್ಮರಣೆಯಲ್ಲಿ ಉಳಿದಿದೆ. ಆಗಸ್ಟ್ 19ರಂದು ಪ್ರತಿ ವರ್ಷ ಅವರ ದಿನಾಚರಣೆಯ ಮೂಲಕ ಸ್ಫೂರ್ತಿ ಪಡೆಯುವವರು ಸಾವಿರಾರು ಜನ.

1943ರ ಕೊನೆ ಅಥವಾ 1944ರ ಪ್ರಾರಂಭ ಇರಬಹುದು. ಹುಬ್ಬಳ್ಳಿಯಲ್ಲಿ ನಾನು ಪಕ್ಷದ ಮತ್ತು ರೈಲ್ವೆ ಕಾರ್ಮಿಕರ ಸಂಘಟನೆ ಮಾಡುತ್ತಿದ್ದಾಗ, 1943 ಅಕ್ಟೋಬರ್ ತಿಂಗಳಲ್ಲಿ ನನ್ನನ್ನು ಧಾರವಾಡ ಜಿಲ್ಲೆಯಿಂದ ಗಡೀಪಾರು ಮಾಡಲಾಯಿತು. ಪಾರ್ಟಿ ಸಂಘಟಿಸಲು ನನ್ನನ್ನು ಅಪರಿಚಿತ ಊರಿಗೆ ಬಿಜಾಪುರಕ್ಕೆ ಕಳುಹಿಸಿಕೊಟ್ಟಿತು ಪಕ್ಷದ ಕೇಂದ್ರ. ಅಲ್ಲಿಂದ ನಾನು ಯಾವುದೋ ಕಾರಣದಿಂದ ಮಂಗಳೂರಿಗೆ ಹೋಗಿದ್ದೆ. ಅಲ್ಲಿ ಪಕ್ಷದ ಮುಖಂಡರಾದ ಎಸ್ ಎಸ್. ಹೊಳ್ಳ ಅವರು ಕುಂಬ್ಳ ಮತ್ತು ಮಂಜೇಶ್ವರಕ್ಕೆ ಹೋಗಿ ಬರೋಣ, ರೈತ ಸಂಘದ ಸಭೆಯಿದೆ, ಕೃಷ್ಣಪಿಳ್ಳೆಯವರೂ ಬರುತ್ತಾರೆಂದು ಹೇಳಿದರು. ನಾವು ನಾಲ್ಕೈದು ಸಂಗಾತಿಗಳು ಅಲ್ಲಿಗೆ ಹೋದ ನಂತರ ಕೃಷ್ಣಪಿಳ್ಳೆಯವರ ಪ್ರಥಮ ದರ್ಶನ ನನಗಾಯಿತು.ಅನಂತರ ಹಲವಾರು ಸಲ ಅವರನ್ನು ಭೇಟಿಯಾಗಿದ್ದೆ. ಮುಂಬೈಯಲ್ಲಿದ್ದಾಗಲೇ ನನಗೆ ಪಿ. ಸುಂದರಯ್ಯನವರ ಪರಿಚಯ ಚೆನ್ನಾಗಿದ್ದುದರಿಂದ ಕೃಷ್ಣಪಿಳ್ಳೆಯವರನ್ನ ಕಂಡಾಗ ನನಗೆ ಸುಂದರಯ್ಯನವರ ನೆನಪಾಗುತ್ತಿತ್ತು. ಸುಂದರಯ್ಯನವರು ನೋಡಲಿಕ್ಕೆ ಎಷ್ಟು ಸರಳವಾಗಿ ಕಾಣುತ್ತಿದ್ದರೋ ಅದೇ ಸರಳತೆ ಕೃಷ್ಣಪಿಳ್ಳೆಯವರಲ್ಲಿ ಕಂಡಿದ್ದೆ. ಸುಂದರಯ್ಯನವರಲ್ಲಿ ಯಾವ ರೀತಿಯ ರಾಜಕೀಯ ಸ್ಪಷ್ಟತೆಯನ್ನು ಕಾಣುತ್ತಿದ್ದೆನೋ ಅದೇ ರೀತಿಯ ಸ್ಪಷ್ಟತೆ ಕೃಷ್ಣಪಿಳ್ಳೆಯವರ ಜೊತೆಯಲ್ಲಿ ಮಾತಾಡಿದಾಗ ಕಂಡುಕೊಂಡೆ. ಕಾಮ್ರೇಡ್ಸರ ಕುರಿತು ಸುಂದರಯ್ಯನವರಲ್ಲಿದ್ದ ಸಾಮೀಪ್ಯತೆ–ಸೌಜನ್ಯತೆಯನ್ನೂ ಕೃಷ್ಣಪಿಳ್ಳೆಯವರಲ್ಲಿ ಕಂಡಿದ್ದೆ.

ಕೃಷ್ಣಪಿಳ್ಳೆಯವರು ಟ್ರಾವಂಕೂರ್ ಜಿಲ್ಲೆಯ ವೈಕಾಂನಲ್ಲಿ ಒಂದು ಬಡ ಕುಟುಂಬದಲ್ಲಿ ಜನಿಸಿದವರು. ಅವರ ಶಿಕ್ಷಣ ಬರೀ 4ನೇ ಇಯತ್ತೆ ಮಾತ್ರ. ತಮ್ಮೂರಲ್ಲಿಯ ದೇವಸ್ಥಾನ ಸುತ್ತ ರಸ್ತೆಯಲ್ಲಿ ಸಂಚರಿಸುವ ಹಕ್ಕಿಗಾಗಿ ಹರಿಜನರು ನಡೆಸುತ್ತಿದ್ದ ಹೋರಾಟದಿಂದ ಸ್ಫೂರ್ತಿ ಪಡೆದು ತನ್ನ ಎಳೆ ವಯಸ್ಸಿನಲ್ಲಿ ರಾಜಕೀಯ ಮತ್ತು ಸಾಮಾಜಿಕ ಸ್ವಾತಂತ್ರ್ಯದ ಆಕಾಂಕ್ಷೆಯಿಂದ ಆಕರ್ಷಿಲ್ಪಪಟ್ಟು, ಹೆಚ್ಚಿನ ಶಿಕ್ಷಣ ಮತ್ತು ಅನುಭವ ಪಡೆಯಲಿಕ್ಕೆ ಚಿಕ್ಕಂದಿನಲ್ಲೆ ಉತ್ತರ ಹಿಂದುಸ್ಥಾನಕ್ಕೆ ಹೋದರು. ಅಲ್ಲಿ ಹಿಂದಿ ಕಲಿತರು. ಭಗತ್‌ಸಿಂಗ್‌ರ ಹಿಂದುಸ್ಥಾನ ಸೋಶಲಿಸ್ಟ್ ರಿಪಬ್ಲಿಕನ್ ಸೈನ್ಯಕ್ಕೆ ಸೇರಿದರು.

ಎರಡು ವರ್ಷಗಳ ನಂತರ ನುರಿತ ರಾಜಕೀಯ ಮುಖಂಡರಾಗಿ ಅವರು ಮಲಬಾರಿಗೆ ಹಿಂತಿರುಗಿದರು ಯಾಕೆಂದರೆ ಆಗಿನ ಟ್ರಾವಂಕೂರ್ ಸಂಸ್ಥಾನದಲ್ಲಿ ಸ್ವಾತಂತ್ರ್ಯ ಚಳುವಳಿ ನಡೆಸುತ್ತಿದ್ದ ರಾಜಕೀಯ ಮುಖಂಡರು ಸಕ್ರಿಯ ಚಳುವಳಿಗೆ ಅವಕಾಶ ಮಾಡಿಕೊಡುತ್ತಿರಲಿಲ್ಲ.ಆದರೆ ಮಲಬಾರಿನಲ್ಲಿ ತೀವ್ರ ಚಳುವಳಿಯ ಸಿದ್ಧತೆ ನಡೆದಿತ್ತು. ಪಿಳ್ಳೆಯವರು ಅದರಲ್ಲಿ ಧುಮುಕಿದರು. ಅವರ ಸರಳತನದಿಂದಾಗಿ ಪ್ರಾರಂಭದಲ್ಲಿ ಅವರನ್ನ ಹೆಚ್ಚಿನ ಜನ ಗಮನಿಸದಿದ್ದರೂ ಕ್ಯಾಲಿಕಟ್ ಸಮುದ್ರ ದಂಡೆಯಲ್ಲಿ ಉಪ್ಪಿನ ಸತ್ಯಾಗ್ರಹ ನಡೆದಾಗ ಅವರ ಜಿಗಟುತನ, ಶೌರ್ಯ ಎಲ್ಲರ ಗಮನ ಸೆಳೆಯಿತು. ಅವರು ಹಿಡಿದಿದ್ದ ರಾಷ್ಟ್ರೀಯ ಧ್ವಜವನ್ನು ಕಸಿದುಕೊಳ್ಳಲು ಪೋಲಿಸರು ಅವರ ಮೇಲೆ ಕೆಲವು ನಿಮಿಷಗಳ ಕಾಲ ಹೊಡೆಯುತ್ತಿದ್ದರೂ ಕೂಡ ಅವರು ಧ್ವಜವನ್ನು ಬಿಟ್ಟುಕೊಡಲಿಲ್ಲ ಆ ಘಟನೆ ಯುವಕರಲ್ಲಿ ಸ್ಫೂರ್ತಿ ನೀಡಿತು.

"1932ರಲ್ಲಿ ನಾನು ಕಾಲೇಜು ಬಿಟ್ಟು ಅಸಹಕಾರ ಚಳುವಳಿಯಲ್ಲಿ ಧುಮುಕಿದಾಗ, ನನ್ನ ಬಂಧನವಾಯಿತು. ಕ್ಯಾಲಿಕಟ್ ಜೈಲಿನಲ್ಲಿ ನಾನು ಕೃಷ್ಣಪಿಳ್ಳೆಯವರನ್ನು ಕಂಡೆ. 1933ರ ಕೊನೆಯಲ್ಲಿ ನಮ್ಮ ಬಿಡುಗಡೆಯ ನಂತರ ನಾವಿಬ್ಬರೂ ಕಾಂಗ್ರೆಸ್‌ನ್ನು ನಿಜವಾಗಿಯೂ ಸಾಮ್ರಾಜ್ಯಶಾಹಿ ವಿರೋಧಿ ಸಂಘಟನೆಯಾಗಿ ಪರಿವರ್ತಿಸಲು, ಕಾರ್ಮಿಕ ವರ್ಗದ, ರೈತರ, ವಿದ್ಯಾರ್ಥಿಗಳ ಹಾಗೆಯೇ ಇತರ ಎಡಪಂಥೀಯವಾದಿ ಸಾಮೂಹಿಕ ಸಂಘಟನೆಗಳನ್ನು ಕಟ್ಟಿ. ಕಾಂಗ್ರೆಸ್ಸಿನಲ್ಲೆ ಕಾಂಗ್ರೆಸ್ ಸೋಶಲಿಸ್ಟ್ ಪಕ್ಷದ ಗುಂಪು ಸಿದ್ಧಗೊಳಿಸಿ, ನಂತರ ಅದನ್ನು ಕಮ್ಯೂನಿಸ್ಟ್ ಪಾರ್ಟಿಯಾಗಿ ಪರಿವರ್ತಿಸುವ ಕಾರ್ಯದಲ್ಲಿ ಮಹತ್ವದ ಪಾತ್ರವಹಿಸಿದ್ದೆವು. ಎಡಪಂಥೀಯ ರಾಷ್ಟ್ರೀಯವಾದಿಯಾಗಿದ್ದ ನನ್ನನ್ನು ಕಮ್ಯೂನಿಸ್ಟನಾಗುವಂತೆ ಪರಿವರ್ತಿಸುವುದರಲ್ಲಿ ಕೇರಳ ಮಟ್ಟದಲ್ಲಿ ಕೃಷ್ಣಪಿಳ್ಳೆಯವರೂ ಅಖಿಲ ಭಾರತ ಮಟ್ಟದಲ್ಲಿ ಪಿ. ಸುಂದರಯ್ಯನವರೂ ಪ್ರಧಾನ ಪಾತ್ರ ವಹಿಸಿದ್ದರೆಂದು" ಇ.ಎಂ.ಎಸ್. ನಂಬೂದಿರಿಪಾಡ್ ಅವರು ಹೇಳುತ್ತಾರೆ.

1930–32ರ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿದ್ದ ಹಲವಾರು ಜನರನ್ನು ಆಕರ್ಷಿಸಿ ಅವರಲ್ಲಿ ಎಡಪಂಥೀಯ ವಿಚಾರಧಾರೆಯನ್ನು ತುಂಬಿ ಕೇರಳದಲ್ಲಿ ಕಾಂಗ್ರೆಸ್ ಸೋಶಲಿಸ್ಟ್ ಪಕ್ಷ ಕಟ್ಟಿ ಅದರ ಸಂಸ್ಥಾಪಕರಾದರು. ಸತತ ಪ್ರಯತ್ನದಿಂದ ಕೇರಳ ಕಾಂಗ್ರೆಸ್ ಕಮಿಟಿಯಲ್ಲಿ ಎಡಪಂಥೀಯರ ಬಹುಮತ ಉಂಟು ಮಾಡಿದರು.

ಕಾಂಗ್ರೆಸ್ ಸೋಶಲಿಸ್ಟ್ ಪಕ್ಷ ಸ್ಥಾಪಿಸಿದ ಒಂದು ವರ್ಷದೊಳಗಾಗಿಯೇ ಪ್ರಥಮ ಅಖಿಲ ಕೇರಳ ಕಾರ್ಮಿಕ ಸಮಾವೇಶ ಸೇರಿಸಿದರು, ಟ್ರಾವಂಕೂರ್, ಕೊಚ್ಚಿನ್ ಮತ್ತು ಮದ್ರಾಸ್ ಪ್ರದೇಶದ (ಈಗಿನ ಕೇರಳ) ಪ್ರತಿನಿಧಿಗಳೆಲ್ಲ ಅದರಲ್ಲಿ ಭಾಗವಹಿಸಿದ್ದರು. ಮೂರು ವರ್ಷಗಳಲ್ಲೇ ಕಾರ್ಮಿಕ ಸಂಘಟನೆ ಮತ್ತು ರಾಜಕೀಯ ಚಳುವಳಿ ಪ್ರಬಲವಾಗಿ ಬೆಳೆಯಿತು. ಟ್ರಾವಂಕೂರಿನಲ್ಲಿ ಜವಾಬ್ದಾರಿ ಸರಕಾರಕ್ಕಾಗಿ ಕಾಂಗ್ರೆಸ್ ನಡೆಸುತ್ತಿರುವ ಚಳುವಳಿಗೆ ಬೆಂಬಲಾರ್ಥವಾಗಿ ಆಲೆಪ್ಪಿಯಲ್ಲಿ ಕಾರ್ಮಿಕ ವರ್ಗದ ಪ್ರಥಮ ರಾಜಕೀಯ ಮುಷ್ಕರ ನಡೆಸಲಾಯಿತು. ಕಾಂಗ್ರೆಸ್ ಸೋಶಲಿಸ್ಟ್ ಪಾರ್ಟಿಯ ಕಾರ್ಯದರ್ಶಿಯಾಗಿ, ಕೆ ಪಿ ಸಿ.ಸಿ.ಯ ಕಾರ್ಯಕಾರಿ ಸಮಿತಿಯ ಸದಸ್ಯನಾಗಿ ಹಲವಾರು ಚರಿತ್ರಾರ್ಹ ಕಾರ್ಮಿಕ ವರ್ಗದ ಕ್ರಾಂತಿಕಾರಿ ಚಳುವಳಿಗೆ ಮಾರ್ಗದರ್ಶನ ನೀಡಿದರು. ಮುಖಂಡತ್ವ ವಹಿಸಿದರು. ಗ್ರಾಮಾಂತರ ಪ್ರದೇಶದಲ್ಲೂ ರೈತರ ಸಂಘಟನೆ ಕಟ್ಟಿದ್ದರು ಕಾರ್ಮಿಕ ರೈತರ ಚಳುವಳಿ ಪ್ರವಾಹವಾಗಿ ಬೆಳೆದು ಬಂದು 8 ವರ್ಷಗಳ ನಂತರ ಚರಿತ್ರಾರ್ಹ ಪುನಪ್ರ–ವಯಲಾರ್ ಹೋರಾಟದ ಕೇಂದ್ರ ಬಿಂದುವಾದರು.

ಕಾರ್ಮಿಕ ವರ್ಗದ ಸಂಘಟನೆ–ಚಳುವಳಿಯ ಜೊತೆಯಲ್ಲಿಯೇ ಮಲಬಾರ್ ಪ್ರದೇಶದಲ್ಲಿ ಬಲಿಷ್ಟವಾದ ರೈತರ ಚಳುವಳಿ ನಡೆಸಿದರು. 1938-39ರಲ್ಲಿ ರೈತರ ಚಳುವಳಿ ಗೇಣಿದಾರರು ಪಾಲುಕೊಡಬಾರದೆಂಬ ಪ್ರಬಲ ಘಟ್ಟ ತಲುಪಿತ್ತು. ಆಗ ಮದ್ರಾಸಿನಲ್ಲಿದ್ದ ಕಾಂಗ್ರೆಸ್ ಸರ್ಕಾರ ರೈತರ ಚಳುವಳಿಗೆ ಮಣಿದು ಗೇಣಿದಾರರ ವಿಚಾರಣ ಸಮಿತಿ ನೇಮಿಸುವಂತಾಯಿತು. ಕೃಷ್ಣಪಿಳ್ಳೆಯವರು ರೈತರ ಪ್ರತಿಯೊಂದು ಚಳುವಳಿಗೆ ವೈಯುಕ್ತಿಕ ಮಾರ್ಗದರ್ಶನ ನೀಡುತ್ತಿದ್ದರು. ಇದರ ಜೊತೆಯಲ್ಲಿಯೇ ವಿದ್ಯಾರ್ಥಿ-ಯುವಕರ ಮಹಿಳೆಯರ, ಮಕ್ಕಳ ಸಂಘಟನೆಗಳನ್ನು ಸ್ವತಂತ್ರವಾಗಿಯೇ ಹಳ್ಳಿ ಮಟ್ಟದಲ್ಲಿಯೇ ಕಟ್ಟಿದರು ಆದರೆ ಕಾಂಗ್ರೆಸ್ ಕಮಿಟಿಗಳೊಡನೆ ಹೊಂದಾಣಿಕೆ ಇಟ್ಟುಕೊಂಡಿದ್ದರು.

ಕೆಳ ಮಟ್ಟದಿಂದಲೇ ಎಲ್ಲ ಜನವಿಭಾಗಗಳ ಸಂಘಟನೆಯನ್ನು ಸ್ವತಂತ್ರವಾಗಿಯೇ ಕಟ್ಟಿಕೊಂಡು ಬಂದಿರುವುದರಿಂದಲೇ ಮಲಬಾರ್,ಟ್ರಾವಂಕೂರ್, ಕೊಚ್ಚಿನಗಳಲ್ಲಿ ಅಂದರೆ ಇಂದಿನ ಸಮಗ್ರ ಕೇರಳದಲ್ಲಿ ಒಂದಕ್ಕೊಂದು ನಿಕಟ ಸಂಬಂಧ ಇರುವಂಥ ಬಲಿಷ್ಟವಾದ ಸಾಮ್ರಾಜ್ಯಶಾಹಿ ವಿರೋಧಿ, ಪ್ರಜಾಪ್ರಭುತ್ವವಾದಿ ಚಳುವಳಿಯನ್ನು ಸಂಘಟಿಸಿ, ವಿಸ್ತರಿಸಲು ಸಾಧ್ಯವಾಯಿತು.

"ಈ ಮಹಾಕಾರ್ಯದಲ್ಲಿ ನಮ್ಮೆಲ್ಲರ ಪಾತ್ರವಿದೆ. ಸಾಮೂಹಿಕ ಮುಖಂಡತ್ವದ ಫಲ ಅದಾಗಿದೆ. ಆದರೆ ಕೃಷ್ಣಪಿಳ್ಳೆಯವರ ಪಾತ್ರ ಮಾತ್ರ ನಮ್ಮೆಲ್ಲರಿಗಿಂತ ಹೆಚ್ಚು ಪ್ರಧಾನವಾಗಿತ್ತೆಂದು ಹೇಳಬಲ್ಲೆ. ಆ ದೃಷ್ಟಿಯಲ್ಲಿ ಕಾಂಗ್ರೆಸ್ ಸೋಶಲಿಷ್ಟ್ ಪಾರ್ಟಿಯ ಸಂಸ್ಥಾಪಕ ಕೃಷ್ಣ ಪಿಳ್ಳೆಯವರಾಗಿದ್ದಾರೆ. ಆದೇ ಪಾರ್ಟಿ ಕಮ್ಯುನಿಸ್ಟ್ ಪಕ್ಷವಾಗಿ ಪರಿವರ್ತನೆಯಾಗುತ್ತ ಬಂತು" ಎಂದು ಇ.ಎಂ.ಎಸ್ ಅವರು ಹೇಳಿದ್ದಾರೆ. ಹಾಗೆಯೇ ಪ್ರತಿಯೊಬ್ಬ ಕಾಮ್ರೆಡರ ಕೆಲಸ ಮಾಡುವ ಶಕ್ತಿ ಅವರ ತಿಳುವಳಿಕೆಗಳ ಸ್ಪಷ್ಟ ಅಭಿಪ್ರಾಯ ಕಂಡು ಹಿಡಿದು, ಅವರಿಂದ ಆಗತಕ್ಕ ಕೆಲಸಗಳನ್ನು ಅವರಿಗೆ ಒಪ್ಪಿಸುತ್ತಿದ್ದರೆಂದೂ ಇ.ಎಂ.ಎಸ್ ಹೇಳಿದ್ದಾರೆ.

ಕೃಷ್ಣ ಪಿಳ್ಳೆಯವರು ಭೂಗತರಾಗಿದ್ದಾಗ 1948 ಆಗಸ್ಟ್ 19ರಂದು ಹಾವು ಕಡಿದು ತೀರಿ ಹೋದರು. ಲೋಕಸಭೆಯ ಒಳಗೂ, ಹೊರಗೂ 1975 ರಲ್ಲಿ ಇಂದಿರಾಗಾಂಧಿ ಹೇರಿದ ತುರ್ತುಪರಿಸ್ಥಿತಿಯನ್ನು ತನ್ನೆಲ್ಲ ಶಕ್ತಿಯನ್ನು ಉಪಯೋಗಿಸಿ ವಿರೋಧಿಸಿದ ಜನಪ್ರಿಯ ಎ.ಕೆ. ಗೋಪಾಲನ್ ಅವರಿಗೆ 1977 ರಲ್ಲಿ ಭಾರತದ ಮತದಾರರು ಸರ್ವಾಧಿಕಾರಿ ಕಾಂಗ್ರೆಯನ್ನು ಸೋಲಿಸಿದ್ದನ್ನು ನೋಡಿ ಆನಂದ ಪಡಲು ಅವಕಾಶ ಸಿಗಲಿಲ್ಲ, ಹಾಗೆಯೇ ಕೇರಳದಲ್ಲಿ ಸ್ವಾತಂತ್ರ್ಯ ಚಳುವಳಿಯನ್ನು ಉಪಯೋಗಿಸಿ, ರೈತ–ಕಾರ್ಮಿಕರ, ಯುವಕರ, ಮಹಿಳೆಯರ–ಹೀಗೆ ಎಲ್ಲಾ ಜನ ವಿಭಾಗಗಳ ಸಂಘಟನೆ ಕಟ್ಟಿ ಕ್ರಾಂತಿಕಾರಿ ಚಳುವಳಿಗೆ ಮಾರ್ಗದರ್ಶನ ನೀಡಿ, ಅದರಲ್ಲಿ ಸಕ್ರೀಯವಾಗಿ ಭಾಗವಹಿಸಿ ನೇತೃತ್ವ ನೀಡಿ ಕಾಂಗ್ರೆಸ್ಸಿನಿಂದ, ಕಾಂಗ್ರೆಸ್ ಸೋಶಲಿಸ್ಟ್ ಪಾರ್ಟಿಯನ್ನು ಕಮ್ಯುನಿಸ್ಟ್ ಪಾರ್ಟಿಯಾಗಿ ಪರಿವರ್ತಿಸಿ, ಅದು ಬಲಿಷ್ಟ, ರಾಜಕೀಯ ಪಕ್ಷವಾಗಿ ಬೆಳೆಯು ಬರುವಂತೆ ಅದನ್ನು ಪಾಲಿಸಿ ಪೋಷಿಸಿದ ಕೃಷ್ಣ ಪಿಳ್ಳೆಯವರು 1957ರಲ್ಲಿ ತನ್ನ ಪಕ್ಷ ಕೇರಳದಲ್ಲಿ ಅಧಿಕಾರಕ್ಕೆ ಬಂದಾಗ, ಭಾರತ ದೇಶದಲ್ಲಿ ಪ್ರಥಮ ಕಮ್ಯುನಿಸ್ಟ್ ಪಕ್ಷ ಚುನಾವಣೆ ಮೂಲಕ ಮೂಡಿ ಬಂದಾಗ ಆನಂದ ಪಡಲು ತಾನು ಶ್ರಮಪಟ್ಟು ಬಿತ್ತಿದ ಬೀಜದಿಂದ ದೊಡ್ಡ ಮರಬೆಳೆದು ಪ್ರತಿಫಲ ಕೊಟ್ಟಾಗ ಅದರ ರುಚಿ ಅನುಭವಿಸಲು ಜೀವಂತ ಉಳಿಯಲಿಲ್ಲ.

ಕಮುನಿಸ್ಟ್‌ರ ಜೀವನವೇ ಅದು ಮಾರ್ಕ್ಸ್‌ವಾದಿ–ಲೆನಿನ್‌ವಾದಿ ತತ್ವಗಳನ್ನು ಅರಗಿಸಿಕೊಂಡು ಜನರ ಮಧ್ಯೆ ಅವರ ಕಷ್ಟ ಸುಖಗಳಲ್ಲಿ ಪಾಲುಗಾರರಾಗಿ ಅವರನ್ನು ಸಂಘಟಿಸಿ ಹೋರಾಡುವುದೇ ಆತ್ಮಾನಂದವೆಂದು ಭಾವಿಸುವವರಿಗೆ ಮತ್ತೇನು ಬೇಕು?

ಸರಳ ಜೀವನ, ಮೃದುಭಾಷೆ ನಿಷ್ಠಾವಂತ ಸೇವೆ, ಸರಿಯಾದ ತಿಳುವಳಿಕೆ, ಆಹೋ ರಾತ್ರಿ ದುಡಿತದ ಪ್ರತೀಕ ಕೃಷ್ಣ ಪಿಳ್ಳೆ ಆಗಿದ್ದರು ಅವರ ಜೀವನ, ತ್ಯಾಗ ಬಲಿದಾನವನ್ನು ಅಭ್ಯಸಿಸಿಕೊಂಡು, ಸ್ಫೂರ್ತಿ ಪಡೆದು ಜನತಾ ಪ್ರಜಾಪ್ರಭುತ್ವ ಕ್ರಾಂತಿಯತ್ತ ಮುಂದೆ ಸಾಗೋಣ. ಅದುವೇ ಕೃಷ್ಣ ಪಿಳ್ಳೆಯವರಿಗೆ ಸಲ್ಲಿಸುವ ಕ್ರಾಂತಿಕಾರಿ ಕೆಂಪು ವಂದನೆಗಳು.

—ಎನ್. ಕೆ. ಉಪಾಧ್ಯಾಯ

23-5-86

"ಮಸೆದುದಿತ್ತಂಡಕ್ಕೆ ಕದನವು ಕೇಳು ಜನಮೇಜಯ ಮಹಿಪಾಲ" ಇದು ಕುಮಾರವ್ಯಾಸನ ನುಡಿ, ಸಾವಿರಾರು ವರ್ಷಗಳ ಮಾತು. ಈಗಲೂ ಶಾಂತಿಯ ಕದನ, ರಾಜಕೀಯ ಯುದ್ಧವಾಗಿ ಮಸೆದಿದೆ ಇತ್ತಂಡಕ್ಕೆ (ಎರಡು ತಂಡಕ್ಕೆ) ಕೇಳಬೇಕಾದವನು ಒಬ್ಬ ವ್ಯಕ್ತಿಯಲ್ಲ ಇಡೀ ಮಾನವ ಸಮುದಾಯ ಈ ಎರಡು ತಂಡಗಳಲ್ಲಿ ಯಾರ್ಯಾರಿದ್ದಾರೆ, ಏಕೆ ಯುದ್ಧಪರ ಶಾಂತಿ ಪರ ತಂಡಗಳಲ್ಲಿದ್ದಾರೆ?

ಸೆಪ್ಟೆಂಬರ್ ಒಂದರಂದು ವಿಶ್ವ ಕಾರ್ಮಿಕ ವರ್ಗದ ಕರೆ–ಶಾಂತಿಗಾಗಿ ಹೋರಾಡಿ ಎಂದು. ಈ ಕರೆಯ ಸಂದರ್ಭದಲ್ಲಿ ಈ ಪ್ರಶ್ನೆಗಳನ್ನು ಪರಿಶೀಲಿಸೋಣ.

ಯುದ್ಧಪರ–ಶಾಂತಿಪ

ಯುದ್ಧ ಯಾರಿಗೆ ಬೇಕು ?

○ ಜಗತ್ತಿನ ಎಲ್ಲಾ ಮಾನವ ಸಮುದಾಯದ ದುಡಿಮೆಯ ಫಲವನ್ನು ಹೀರಬೇಕೆನ್ನುವ ಬಹುರಾಷ್ಟ್ರೀಯ ಕಂಪನಿ ಬ್ಯಾಂಕುಗಳ ಒಡೆಯರಾದ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ,

○ ಅಮೇರಿಕದ ನಾಯಕತ್ವದಲ್ಲಿ ಕೆನಡಾ, ಇಂಗ್ಲೆಂಡ್, ಪ. ಜರ್ಮನಿ, ಫ್ರಾನ್ಸ್ ಇಟಲಿ, ನೆದರ್‌ಲ್ಯಾಂಡ್ಸ್, ಮೊದಲಾದ ನ್ಯಾಟೋ ಕೂಟದ ದೇಶದ ಆಳುವ ವರ್ಗಗಳಿಗೆ,

○ ತನ್ನ ನೆರೆಹೊರೆಯ ದೇಶಗಳ ಮೇಲೆ ಆಕ್ರಮಣ ಮಾಡುತ್ತಾ, ತನ್ನ ದೇಶದ ಜನತೆಯ ಮೇಲೆಯೇ ದಾಳಿ ಮಾಡುತ್ತಾ ಅಪಾರ್ಥೀಡ್ ನೀತಿಯನ್ನು ಪ್ರತಿಪಾದಿಸುತ್ತಿರುವ ದ. ಆಫ್ರಿಕಾ ಜಿಯೋನಿಜಂ ನೀತಿಯನ್ನು ಅನುಸರಿಸುತ್ತಿರುವ ಇಸ್ರೇಲ್‌ಗಳ ಆಳುವ ವರ್ಗಕ್ಕೆ,

● ಅಮೇರಿಕದ ಜೊತೆ ರಕ್ಷಣಾ ಕೌಲುಗಳಿಂದ ಬಂಧಿತರಾಗಿರುವ ಜಪಾನ್ ಹಾಗೂ ಆಸ್ಟ್ರೇಲಿಯ ಮೊದಲಾದ ದೇಶಗಳ ಆಳುವ ವರ್ಗಕ್ಕೆ,

● ತನ್ನ ದೇಶದ ಜನತೆಯ ಮೇಲೆ ದೌರ್ಜನ್ಯವೆಸಗುತ್ತಾ, ಜನಪ್ರಿಯ ಪ್ರಜಾಸತ್ತಾತ್ಮಕ ಚಳುವಳಿಗಳ ಫಲವಾಗಿ ಬೆದರಿಹೋಗಿರುವ ಪಾಕಿಸ್ಥಾನ, ದ ಕೊರಿಯ, ಚಿಲಿ, ಹೊಂಡುರಾಸ್, ಗ್ವಾಟೆಮಾಲ ಮೊದಲಾದ ದೇಶಗಳ ಸರ್ವಾಧಿಕಾರಿ ರಕ್ಕಸರಿಗೆ.

ಶಾಂತಿಪರ ಶಕ್ತಿಗಳು ಯಾರು?

○ ಈ ಜಗತ್ತಿನಲ್ಲಿ ಉದಿಸಿದ ತಕ್ಷಣವೇ ಶಾಂತಿ ಘೋಷಣೆಯನ್ನು ಮಾಡಿದ ಸೋವಿಯತ್ ಒಕ್ಕೂಟದ ನಾಯಕತ್ವದಲ್ಲಿರುವ ಸಮಾಜವಾದಿ ಬಣ – ಈ ದೇಶಗಳ, ಜಗತ್ತಿನ ಮೂರನೇ ಒಂದು ಭಾಗ ಜನತೆ,

○ ನ್ಯಾಟೋ ಕೂಟದ ಅಣ್ವಾಸ್ತ್ರ ಸಂಗ್ರಹ, ಯುದ್ಧಾಸ್ತ್ರಗಳಿಗೆ ಹೆಗಲೆಣೆಯಾದ, ಸಂಸವಾಲಾದ ಅಸ್ತ್ರಬಲವನ್ನು ಪಡೆದು 2ನೇ ಮಹಾಯುದ್ಧದ ನಂತರ 40 ವರ್ಷಗಳ ಕಾಲ ಜಗತ್ತಿನಲ್ಲಿ ಮತ್ತೊಂದು ಮಹಾಯುದ್ಧ ಆರಂಭವಾಗದಂತೆ ತಡೆಯೊಡ್ಡಿರುವ ವಾರ್ಸಾ ಕೌಲು ರಾಷ್ಟ್ರಗಳ ಸರ್ಕಾರ ಹಾಗೂ ಜನತೆ,

● ಪಾಶ್ಚಿಮಾತ್ಯ ದೇಶಗಳಲ್ಲಿ ಮುಖ್ಯವಾಗಿ ಅಮೇರಿಕಾ, ಇಂಗ್ಲೆಂಡ್ ಪ. ಜರ್ಮನಿ, ಫ್ರಾನ್ಸ್, ನಾರ್ವೆ, ನೆದರ್‌ಲ್ಯಾಂಡ್ ಮೊದಲಾದ ನ್ಯಾಟೊ ರಾಷ್ಟ್ರಗಳಲ್ಲಿ ತಮ್ಮ ದೇಶದ ಆಳುವ ವರ್ಗಗಳ ಯುದ್ಧಕೋರ ನೀತಿಯಿಂದ ಕುಪಿತರಾಗಿ ಪ್ರತಿಭಟಿಸುತ್ತಿರುವ ಕೋಟ್ಯಾಂತರ ಶಾಂತಿಪರ ಹೋರಾಟಗಾರ ಜನತೆ–ಮುಖ್ಯವಾಗಿ ಕಾರ್ಮಿಕವರ್ಗ, ನೌಕರವರ್ಗ,

○ ಮೂರನೇ ಜಗತ್ತೆಂದು ಹೆಸರಾದ ಅಲಿಪ್ತ ರಾಷ್ಟ್ರಗಳ ಕೂಟದಲ್ಲಿರುವ ಅಭಿವೃದ್ಧಿಹೊಂದುತ್ತಿರುವ ಭಾರತ ಮೊದಲಾದ ರಾಷ್ಟ್ರಗಳ ಭೂಮಾಲೀಕ – ಬಂಡವಾಳಶಾಹಿ ಆಳುವ ವರ್ಗದ ಅಥವಾ ಜನತಾ ಪ್ರಜಾಪ್ರಭುತ್ವ ಸರ್ಕಾರಗಳು ಮತ್ತು ಜನತೆ,

O ಅಲಿಪ್ತ ರಾಷ್ಟ್ರಗಳ ಕೂಟಕ್ಕೆ ಸೇರದಿದ್ದರೂ, ಯುರೋಪಿನ ಪಶ್ಚಿಮ ರಾಷ್ಟ್ರಗಳ ಮಧ್ಯೆ ಇದ್ದರೂ ಶಾಂತಿಯನ್ನು ಬಯಸುತ್ತಿರುವ ಸ್ವೀಡನ್ ಗ್ರೀಸ್ ಮೊದಲಾದ ದೇಶಗಳ ಆಳುವ ವರ್ಗ ಹಾಗೂ ಜನತೆ.

O ಕೆಲವೇ ಜನ ಬೆರಳೆಣಿಕೆಯ ಲಾಭಬಡುಕ ರಣಹದ್ದುಗಳು, ಅವರ ಕಾಲು ನೆಕ್ಕುವವರನ್ನು ಬಿಟ್ಟರೆ ಇಡಿ ಜಗತ್ತಿನ ಮಾನವ ಸಮುದಾಯ,

ಇವರೇಕೆ ಯುದ್ಧವನ್ನು ಬಯಸುತ್ತಾರೆ?

1914–1918ರ ನಡುವೆ ನಡೆದ ಮೊದಲ ಮಹಾ ಯುದ್ಧದ ಸಮಯದಲ್ಲಿ ಸಾಮ್ರಾಜ್ಯಶಾಹಿಗಳ ಲಾಭ 1914ರಲ್ಲಿದ್ದುದಕ್ಕಿಂತ ಎರಡು ಪಟ್ಟು ಹೆಚ್ಚಾಯಿತು. ಎರಡನೆ ಮಹಾ ಯುದ್ಧದ ಸಮಯದಲ್ಲಿ ಈ ಲಾಭ ನೂರು ಪಟ್ಟು ಹೆಚ್ಚಾಯಿತು! ಸಮಾಜವಾದದ ಮುನ್ನಡೆಯನ್ನು ತಡೆಯುವ ಉದ್ದೇಶದ ಒಂದು ಸ್ಥಳೀಯ ಯುದ್ಧ, ಕೊರಿಯಾದ ಮೇಲೆ ಸಾಮ್ರಾಜ್ಯಶಾಹಿ ಅಮೇರಿಕ ನಡೆಸಿದ ಧಾಳಿಯ ಫಲವಾಗಿ ಸಾಮ್ರಾಜ್ಯಶಾಹಿಗಳ ಲಾಭ ಮತ್ತೆ ದುಪ್ಪಟ್ಟಾಯಿತು. ಹೀಗೆ ಮಾನವ ರಕ್ತದ ರುಚಿನೋಡಿದ ನರಭಕ್ಷಕ ಹುಲಿಗೆ ಬೇರೆ ಯಾವ ಆಹಾರವೂ ರುಚಿಸದಂತೆ ಈ ರಣ ಹದ್ದುಗಳಿಗೂ ಯುದ್ಧದ ಲಾಭದ ರುಚಿ ಹತ್ತಿದೆ.

ಎರಡನೇ ಮಹಾಯುದ್ಧದ ಸಮಯದಲ್ಲಿ ಯುದ್ಧಾಸ್ತ್ರಗಳನ್ನು ತೀವ್ರವಾಗಿ ತಯಾರಿಸುತ್ತಿದ್ದ ಕಾರಖಾನೆಗಳನ್ನು ಮತ್ತೆ ನಾಗರಿಕರ ದಿನನಿತ್ಯ ವಸ್ತುಗಳನ್ನು, ಕಟ್ಟಡ ತಯಾರಿಕೆ ವಸ್ತುಗಳನ್ನು, ಸಂಚಾರದ ವಾಹನಗಳನ್ನು ತಯಾರಿಸುವುದಕ್ಕೆ ಸಮಾಜವಾದಿ ದೇಶಗಳು ಪರಿವರ್ತಿಸಿ ತಮ್ಮ ದೇಶಗಳ ಜನತೆಯ ಸುಖ ಸಂತೋಷಕ್ಕೆ ಕಾರಣವಾದರೆ ಅಮೇರಿಕ ಹಾಗೂ ಇತರ ಸಾಮ್ರಾಜ್ಯಶಾಹಿ ದೇಶಗಳ ಲಾಭಕೋರ ರಕ್ಕಸರು ಯು[ದ್ಧಾ]ಸ್ತ್ರಗಳ ತಯಾರಿಕೆ ಮುಂದುವ[ರಿಸಿ] ಅದನ್ನು ಮಾರುವುದಕ್ಕೆ ಗಿ[ರಾಕಿ]ಗಳನ್ನು ಹುಡುಕತೊಡಗಿದ[ರು]. ಗಿರಾಕಿಗಳು ಸಿಕ್ಕದಿದ್ದಾಗ ಯು[ದ್ಧ]ವಿಲ್ಲದ ಕಡೆ ಯುದ್ಧವನ್ನು, ಎ[ರಡು] ದೇಶಗಳ, ಜನಾಂಗಗಳ ನಡುವೆ ಗ[ಲಭೆ]ಯನ್ನು ಹುಟ್ಟುಹಾಕತೊಡಗಿದರು.

ಲಾಭವೊಂದೇ ಏಕ ಮಾತ್ರ ಗ[ುರಿ]ಯಾಗಿರುವ ಸಾಮ್ರಾಜ್ಯ ಶಾಹಿಗ[ಳು] ಈ ಎಲ್ಲಾ ಅಣ್ವಾಸ್ತ್ರಗಳ, ಕ್ಷಿಪಣಿ[ಗಳ] ತಾರಾಸಮರದ ಪ್ರಯತ್ನಗಳನ್ನು ಜ[ಗ]ತ್ತಿನ ಎಲ್ಲಾ ಕಡೆ ದ್ವೇಷವನ್ನು, ಯು[ದ್ಧ]ದ ಸಾಧ್ಯತೆಗಳನ್ನು ಹುಟ್ಟು ಹಾ[ಕು]ತ್ತಿರುವುದು, ಕೇವಲ ಲಾಭಕ್ಕಾ[ಗಿ] ಅತಿ ಹೆಚ್ಚಿನ ಲಾಭಕ್ಕಾಗಿ ಮಾನವರ[ಕ್ತ] ಕಾಲುವೆಯಾಗಿ ಹರಿದರೂ ಚಿಂತೆಯಿ[ಲ್ಲ] ಲಾಭ ಬೇಕು ಎಂಬ ಪಿಶಾಚ ದಾ[ಹ]ದಿಂದ ಮಾತ್ರ.

ಜನಾಂಗ ಜನಾಂಗಗಳ ನಡುವೆ ಬೆ[ಂಕಿ]ಕು ತಂದೊಡ್ಡುವ ಈ ಕೆಲಸದಿಂ[ದ] ಲೆಬನಾನ್ ಇಂದು ಚೂರು ಚೂರಾ]ಗಿದೆ ಪ್ಯಾಲೆಸ್ತೀನಿಯರು ನೆಲೆ ಇಲ್ಲ[ದೆ] ಅಲೆಯುತ್ತಿದ್ದಾರೆ.


ಪಾಕಿಸ್ತಾನಕ್ಕೆ ಇತ್ತೀಚೆಗೆ ನೀಡುತ್ತಿರುವ ಅಪಾರ ಸಂಖ್ಯೆಯ ಆಧುನಿ[ಕ] ಶಸ್ತ್ರಾಸ್ತ್ರಗಳನ್ನು F–16 ಅವಾಕ್[ಸ್] ಗಳನ್ನು ನೆನೆಸಿಕೊಳ್ಳಿ. ಹೀಗೆ ಪಾ[ಕಿ]ಸ್ತಾನಕ್ಕೆ ಮಾತ್ರವಲ್ಲ ನಿಮಗೂ ಕೊಡು]ತ್ತೇವೆ, ನೀವೂ ಬೇಕಾದರೆ ನಮ್ಮಿಂದ ಶಸ್ತ್ರಾಸ್ತ್ರ ಪಡೆಯಿರಿ ಎಂದು ಭಾರತ[ವ]ನ್ನು ತಮ್ಮ ಹಿಡಿತಕ್ಕೆತಂದುಕೊಳ್ಳುವ ಪ್ರಯತ್ನವನ್ನು ಗಮನಿಸಿ (ಮುಂದಿನ ಸಂಚಿಕೆಯಲ್ಲಿ "ಪಟಾಕಿಯವರು" ನಾಟಕ ಓದಿ)

ಖಡ್ಗಗಳನ್ನು

ಬಡಿದು

ನೇಗಿಲುಗಳನ್ನು

ಮಾಡುವಾ



ಇದು ಸೋವಿಯತ್ ಒಕ್ಕೂಟದ ಘೋಷಣೆ ಹಾಗೂ ಕಾಣಿಕೆ ವಿಶ್ವಸಂಸ್ಥೆಯ ಮೂಲಕ ಇಡೀ ವಿಶ್ವಕ್ಕೆ ನೀಡಿದ ಕೊಡುಗೆ

ಅಮೇರಿಕದ ಶತಕೋಟಿ ಪತಿಗಳು ಸಾವಿರಾರು ಕೋಟಿ ಡಾಲರುಗಳನ್ನು–ಕೊಳಕು ಮೆತ್ತಿದ ಡಾಲರುಗಳನ್ನು ದೋಚಿದ್ದಾರೆ. ಸಾಹುಕಾರರನ್ನು ಸಾಹುಕಾರರನ್ನಾಗಿಸುವ, ಬಡವರನ್ನು ಬಡವರನ್ನಾಗಿ ಮಾಡುವ ಅತಿ ಲಾಭದಾಯಕ ಮಿಲಿಟರಿ ಸರಕುಗಳ ಮಾರಾಟದ ಕೊಳಕು ಮೆತ್ತಿದೆ ಪ್ರತಿ ಡಾಲರ್ ನಾಣ್ಯಕ್ಕೂ. ರಕ್ತದಲ್ಲಿ-ಮಾನವನ ರಕ್ತದಲ್ಲಿ, ಆ ಶ್ರೇಷ್ಠ, ಮಹಾ, ಪವಿತ್ರ ವಿಮೋಚನಾ ಯುದ್ಧ(ವೆಂದು ಸಾಮ್ರಾಜ್ಯ ಶಾಹಿಗಳು ಕೊಂಡಾಡುತ್ತಿದ್ದ ಮೊದಲನೆ ಮಹಾಯುದ್ಧ) ದಲ್ಲಿಸತ್ತ ಕೋಟಿಜೀವಗಳ ಕೈಕಾಲು ಕಳೆದುಕೊಂಡ 2ಕೋಟಿ ಮಾನವರ ರಕ್ತದ ಮಹಾಸಾಗರದಲ್ಲಿ ಅದ್ದಿ ತೆಗೆಯಲಾಗಿದೆ ಪ್ರತಿ ಡಾಲರ್ ನಾಣ್ಯವನ್ನು

–ಲೆನಿನ್

'ಅಮೇರಿಕದ ಕಾರ್ಮಿಕರಿಗೊಂದು ಪತ್ರ'ದಲ್ಲಿ

ಕುರುಡು ಡಾಲರ್

ಕುರುಡು ಡಾಲರ್ ಕುಣಿಯುತಲಿತ್ತೊ
ಕಾಲಿಗೆ ಬಿದ್ದವರ ತುಳಿಯುತಲಿತ್ತೊ

ಸಣ್ಣ ಕಂದಮ್ಮಗಳ ಕಣ್ಣಿನ ಕವಡೆಯ
ತಣ್ಣನ್ನ ಜೋಮಾಲೆ ಕೊರಳೊಳಗಿತ್ತೊ

ಕೂಲಿ ಕುಂಬಳಿಯವರ ಪಾಲಿನ ವೈದೊಗಲ
ಧೂಳಿಯ ಭಂಡಾರ ಹಣೆಯೊಳಗಿತ್ತೊ

ಹ್ಯಾಂಗಾರೆ ಕುಣಿ ಕುಣಿದು ಮಂಗಾಟ ನಡೆದಾಗ
ಅಂಗಾತ ಬಿತ್ತೊ, ಹೆಗಲಲಿ ಎತ್ತೊ

—ದರಾ ಬೇಂದ್ರೆಯವರ ಕ್ಷಮೆ ಕೇಳಿ

ಶಕ್ತಿಗಳಿಗೆ ಕದನ ಮುಸೆದಿದೆ

ನಮಗೇಕೆ ಶಾಂತಿಬೇಕು ?

ಈ ಯುದ್ಧಾಸ್ತ್ರಗಳ ತಯಾರಿಕೆ ಯತ್ನದಲ್ಲಿ ಅಣು ನಾಶದ ಯತ್ನದಲ್ಲಿ ಎಷ್ಟು ಹಣ ತೊಡಗಿದೆ ತ್ತೆ ?

ಒಂದು ದಿನಕ್ಕೆ ಎರಡುನೂರು ೋಟಿ ಡಾಲರುಗಳು (ಸುಮಾರು 400 ಕೋಟಿ ರೂ.ಗಳು) ಒಂದು ಟೆಗೆ 8 ಕೋಟಿ ಡಾಲರುಗಳು, ದು ನಿಮಿಷಕ್ಕೆ 15 ಲಕ್ಷ ಡಾಲರುಗಳಿ ತಲೂ ಹೆಚ್ಚು ಹಣವನ್ನು ಒಂದು ರ್ಷಕ್ಕೆ ಒಂದು ಲಕ್ಷ ಕೋಟಿ ಡಾಲರು ಷ್ಟು ಹಣವನ್ನು ಇಡೀ ವಿಶ್ವವನ್ನೇ ಶಮಾಡುವ ಈ ಉದ್ಯಮದಲ್ಲಿ ಡಗಿಸಲಾಗುತ್ತಿದೆ.

ರೆಯು ದೇಶಗಳಿಗೆ ಬಂದು ಬೀಳುತ್ತಿದೆ. ಖಾಲಿಸ್ತಾನದ ಪ್ರಚೋದನೆಗೆ, ಹಿಂಸೆಗೆ ಉಪಯೋಗವಾಗುವ ಮೆಷಿನ್‌ಗನ್‌ಗಳಾಗುತ್ತಿದೆ ಎಂಬುದು ಇಲ್ಲಿನ ಚಿರ ಸತ್ಯ.

ನಮ್ಮ ಹಳ್ಳಿಯ ಶಾಲೆಗೆ, ಆಸ್ಪತ್ರೆಯ ಕಟ್ಟಡಕ್ಕೆ ಒದಗಬೇಕಾದ ಹಣ ಕುಡಿಯುವ ನೀರು, ಸಂಚಾರ ಸೌಕರ್ಯಕ್ಕೆ ಒದಗಬೇಕಾದ ಹಣ ಹೀಗೆ ಯುದ್ಧಾಸ್ತ್ರಗಳ ಕೊಳ್ಳುವಿಕೆಗೆ ಉಪಯೋಗವಾಗುತ್ತಿದೆ ಈ ಅಂಕಿ ಸಂಖ್ಯೆಗಳನ್ನು ನೋಡಿ :

ಏಷ್ಯಾ, ಆಫ್ರಿಕಾ, ಲ್ಯಾಟಿನ್ ಅಮೇರಿಕಾ ಖಂಡಗಳ ದೇಶಗಳ ಒಟ್ಟು ರಾಷ್ಟ್ರೀಯ ಉತ್ಪತ್ತಿಯಲ್ಲಿ ಶೇ 6 ಭಾಗ ಶಸ್ತ್ರಾಸ್ತ್ರಗಳಿಗಾಗಿ ವೆಚ್ಚವಾದರೆ, ಕೇವಲ ಶೇ. 1 ಭಾಗ ಆರೋಗ್ಯಕ್ಕೆ, ಶೇ 2.6 ಭಾಗ ಶಿಕ್ಷಣಕ್ಕೆ ವೆಚ್ಚವಾಗುತ್ತದೆ.

ಸಾಮ್ರಾಜ್ಯಶಾಹಿ ತನ್ನ ಎಲ್ಲಾ ಮಾಧ್ಯಮಗಳಿಂದ–ಟಿವಿ, ರೇಡಿಯೊ, ಪತ್ರಿಕೆಗಳು, ಸುದ್ದಿ ಸಂಸ್ಥೆಗಳಿಂದ–ಸುಳ್ಳು ಸುದ್ದಿಗಳನ್ನು ಹರಡಿ ಇಡೀ ಮಾನವ ಸಮುದಾಯಕ್ಕೆ ಮೋಸಮಾಡಲು ಕಣ್ಣಿಗೆ ಮಣ್ಣೆರಚಿ ತಾನು ಕೊಬ್ಬಿ ಬೆಳೆಯಲು ಯತ್ನಿಸುತ್ತಿದ್ದಾನೆ. ಮೂರನೇ ಯುದ್ಧ ಎಂತಹುದೆಂದರೆ ಅದು ಆರಂಭವಾಗುವುದಕ್ಕೆ ಬಿಡದಂತೆ ತಡೆದರೆ ಮಾತ್ರ ನಮ್ಮ ನಿಮ್ಮೆಲ್ಲರಿಗೆ ಉಳಿಗಾಲ. ಇಡೀ ಮಾನವ ಸಮುದಾಯಕ್ಕೆ ಉಳಿಗಾಲ.

ಈ ಹಣದಲ್ಲಿ ಬಹಳ ಭಾಗ ಬಹು ಷ್ಟ್ರೀಯ ಕಂಪನಿಗಳು ಅಭಿವೃದ್ಧಿ ಂದುತ್ತಿರುವ ದೇಶಗಳಿಂದ ೀಚಿದ್ದೇ ಆಗಿದೆ. ನಮಗೆ ಬ್ಲೇಡು ತ್ ಪೇಸ್ಟ್‌ಗಳನ್ನು, ಔಷಧಿ, ರಸ ಬ್ಬರ, ರಾಸಾಯನಿಕಗಳನ್ನೂ ತ್ರಜ್ಞಾನ, ಯಂತ್ರಗಳನ್ನು ಮಾರಿ ದರಿಂದ ಬಂದ ಲಾಭ ಈ ಅಣ್ವಸ್ತ್ರ ತಯಾರಿಕೆಗೆ ವಿನಿಯೋಗವಾಗು ದೆ.

ನಮ್ಮ ದುಡಿಮೆ, ಬೆವರಿನ ಹಣ ..., ಗ್ಸಿಗಿ, ಜೆಲ್, ಬೇಯರ್ ಪನಿಗಳ ಲಾಭವಾಗಿ ಕೊನೆಗೆ ಮ್ಮ ಸ್ಮೈ ಮುಗಿಸುವ ುದ್ಧಾಸ್ತ್ರಗಳಾಗಿ ಪ್ರಮ್ಮ ಸೆರಿಜೊ

...ಶಾಂತಿ ಒಪ್ಪಂದಗ ಮಾತುಕತೆಗಳು ಮತ್ತು ಅಮೇರಿಕ

ಬರ್ಲಿನ್ ಶೃಂಗ ಸಭೆಯಲ್ಲಿ ಡಲ್ಲೆಸ್ (ಅಮೇರಿಕದ ವಿದೇಶಾಂಗ ಸಚಿವ-ಪ್ರಸಿದ್ಧ ಕಮ್ಯೂನಿಸ್ಟ್ ವಿರೋಧಿ ಜ್ವರವನ್ನು ಹುಟ್ಟು ಹಾಕಿದವ) ರವರ ಪಾತ್ರ ಒಂದು ವಿಷಯವನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಅಮೇರಿಕದ ಶತಕೋಟಿಪತಿಗಳು ವಿಶ್ವದ ಶಾಂತಿ ಚಳುವಳಿಯ ಒತ್ತಾಯಕ್ಕೆ ಮಣಿದು ಒಂದೆರಡು ಒಪ್ಪಂದದ ಮಾತುಕತೆಗಳಲ್ಲಿ (ಶೃಂಗ ಸಭೆಗಳಲ್ಲಿ) ತಮ್ಮ ಮೂಲ ನಿಲುವನ್ನು ಒಂದಿಷ್ಟೂ ಬದಲಾಯಿಸದೆ, ಚರ್ಚೆಯಲ್ಲಿರುವ ಪ್ರಶ್ನೆಗಳಲ್ಲಿ ಒಂದನ್ನಾದರೂ ತಿರ್ಮಾನಿಸದೆ ಭಾಗವಹಿಸಬಹುದು.

ಆದರೆ ಶಾಂತಿಯುತ ಸಹಬಾಳ್ವೆಯು ಮಾರ್ಗ (ಅಮೇರಿಕನ್) ಸರ್ಕಾರದ ಮೂಲ ನೀತಿಯಾದಾಗ ಮಾತ್ರವೇ ಗಂಭೀರ ಮಾತುಕತೆಯ ಬಗ್ಗೆ ಭರವಸೆಯಿಡುವುದು ಸಾಧ್ಯ.

—ಪೊಲಿಟಿಕಲ್ ಅಫೇರ್ಸ್
ಅಮೇರಿಕನ್ ಮಾಸಪತ್ರಿಕೆ,
1954ರ ಏಪ್ರಿಲ್‌ನಲ್ಲಿ,

ಈಗಲಾದರೂ ಈ ಪರಿಸ್ಥಿತಿಯಲ್ಲಿ ಏನಾದರೂ ಬದಲಾವಣೆಯಾಗಿದೆಯೆ ?

ಜಿನೇವಾ ಶೃಂಗ ಸಭೆಯಲ್ಲಿ ರೀಗನ್–ಗೊರ್ಬಾಚೆವ್‌ರವರ ಮಾತುಕತೆಯ ನಂತರ ರೀಗನ್‌ರವರ ವರ್ತನೆ ಇದೇ ರೀತಿ ಮುಂದುವರಿದಿಲ್ಲವೆ ?

ವಿಶ್ವಸಂಸ್ಥೆ 1986ನ್ನು ಅಂತರರಾಷ್ಟ್ರೀಯ ಶಾಂತಿ ವರ್ಷವೆಂದು ಘೋಷಿಸಿತು. ಇದರಲ್ಲಿ ಈಗಾಗಲೇ ಎಂಟು ತಿಂಗಳು ಕಳೆದುಹೋಗಿವೆ. ಆದ್ದರಿಂದ ಇದನ್ನು ಪ್ರಾಮಾಣಿಕವಾಗಿ ಪಾಲಿಸಿದವರು ಯಾರು, ಗೋಸುಂಬೆತನ ಪ್ರದರ್ಶಿಸಿದವರು ಯಾರು ಎಂಬುದನ್ನು ಈಗ ಪರಿಶೀಲಿಸಿದರೆ ತಪ್ಪಾಗಲಾರದು.

ಅದನ್ನು ಪರೀಕ್ಷಿಸಲು ರಾಷ್ಟ್ರೀಯ ಸೌಲಭ್ಯಗಳು, ಅಂತರರಾಷ್ಟ್ರೀಯ ವಿಧಾನಗಳು ಮತ್ತು ಸ್ಥಳದಲ್ಲೇ ವೀಕ್ಷಣೆ ಮುಂತಾದವುಗಳನ್ನೊಳಗೊಂಡ ಒಂದು ನಂಬಲರ್ಹ ಪರಿಣಾಮಕಾರೀ ವ್ಯವಸ್ಥೆ ರೂಪಿಸುವ ಮೂರ್ತ ಪ್ರಸ್ತಾಪಗಳನ್ನು ಪಾಶ್ಚಿಮಾತ್ಯ ದೇಶಗಳ ಮುಂದಿಟ್ಟಿತು.

ಮುಖಂಡರು ಈ ಬಗ್ಗೆ ಮಾತುಕತೆಗೆ ನಿರ್ದಿಷ್ಟ ದಿನಾಂಕ ಗೊತ್ತು ಪಡಿಸಬೇಕೆಂದು ಒತ್ತಾಯಿಸಿ ಪರಮಾಣು ಪರೀಕ್ಷಣಾ ನಿರ್ಬಂಧದ ಉಸ್ತುವಾರಿಯನ್ನು ನೋಡಿಕೊಳ್ಳಲು ಪರಿಣಾಮಕಾರೀ ವ್ಯವಸ್ಥೆಯನ್ನು ರೂಪಿಸುವ ದೃಢ ಪ್ರಸ್ತಾಪಗಳನ್ನು ಮುಂದಿಟ್ಟಿತು. ಸಾಮ್ರಾಜ್ಯಶಾಹಿಗಳ "ಕೊಡುಗೆ"

ಇವೆಲ್ಲಾ ಶಾಂತಿಪ್ರಯತ್ನಗಳಿಗೆ ಅಮೆರಿಕಾ ಹಾಗೂ ನಾಟೋ ದೇಶಗಳ ಪ್ರತಿಕ್ರಿಯೆಯೇನು ? ಶಾಂತಿ ವರ್ಷದಲ್ಲಿ ಅವುಗಳ ಕೊಡುಗೆಯೇನು?

ಆರು ರಾಷ್ಟ್ರಗಳ ಇತ್ತೀಚಿನ ಮನವಿಯನ್ನು ಸೋವಿಯತ್ ಒಕ್ಕೂಟ

ಶಾಂತಿ ವರ್ಷದಲ್ಲಿ ಏನು ನಡೆದಿದೆ ?

1986 ಆರಂಭವಾಗುತ್ತಿದ್ದಂತೆಯೇ ಈ ಶತಮಾನದ ಅಂತ್ಯದೊಳಗೆ ವಿಶ್ವವನ್ನು ಪರಮಾಣು ಶಸ್ತ್ರಾಸ್ತ್ರಗಳಿಂದ ಮುಕ್ತಗೊಳಿಸುವ ನಿರ್ದಿಷ್ಟ ಪ್ರಸ್ತಾಪಗಳು ವಿಶ್ವದ ಜನತೆಯ ಮುಂದೆ ಇಡಲ್ಪಟ್ಟವು. ಇದನ್ನು ಮಂಡಿಸಿದವರು ಸೋವಿಯತ್ ಒಕ್ಕೂಟದ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಮಿಖ್ಯಾಲ್ ಗೊರ್ಬಚೆವ್.

ಜುಲೈ 1985ರಲ್ಲಿ ಪರಮಾಣು ಪರೀಕ್ಷಣೆಗಳ ಮೇಲೆ ಏಕಪಕ್ಷೀಯವಾಗಿ ಹಾಕಿಕೊಂಡ ನಿರ್ಬಂಧವನ್ನು ಮುಂದುವರಿಸುವ ಘೋಷಣೆ ಇದೇ ತಿಂಗಳಲ್ಲಿ ಹೊರಬಿತ್ತು – ಇದು ಕೂಡಾ ಮಾಸ್ಕೋದಿಂದ.

ಬಾಹ್ಯಾಕಾಶದಲ್ಲಿ ಶಸ್ತ್ರಾಸ್ತ್ರ ಪೈಪೋಟಿಯ ಆರಂಭವನ್ನು ತಡೆಯಲು, ಪಾರಂಪರಿಕ ಹಾಗೂ ರಾಸಾಯನಿಕ ಶಸ್ತ್ರಾಸ್ತ್ರಗಳನ್ನು ಮಿತಿಗೊಳಿಸಲು, ಯೂರೋಪಿನಲ್ಲಿ ಮಧ್ಯಮ ಶ್ರೇಣಿಯ ಕ್ಷಿಪಣಿಗಳನ್ನು ಮಿತಿಗೊಳಿಸಲು, ಅಂತರಷ್ಟ್ರೀಯ ಶಾಂತಿ ಮತ್ತು ಭದ್ರತೆಯ ಸ್ಥಾಪನೆಗೆ ಹಲವಾರು ನಿರ್ದಿಷ್ಟ ಪ್ರಸ್ತಾಪಗಳನ್ನು ಸೋವಿಯತ್ ಒಕ್ಕೂಟ ಕಮ್ಯೂನಿಸ್ಟ್ ಪಕ್ಷ ಹಾಗೂ ಇತರ ಸಮಾಜವಾದೀ ದೇಶಗಳ ಕಮ್ಯೂನಿಸ್ಟ್ ಪಕ್ಷಗಳ ಮಹಾಧೀವೇಶನಗಳು ಮತ್ತೆ ಮತ್ತೆ ಸಾರಿ ಹೇಳಿದವು.

ಜೂನ್ 10-11 ಬುಡಾಪೆಸ್ಟ್‌ನಲ್ಲಿ ಸಭೆ ಸೇರಿದ ವಾರ್ಸಾ ಕೌಲು ದೇಶಗಳ ರಾಜಕೀಯ ಸಲಹಾ ಸಮಿತಿ ಅಟ್ಲಾಂಟಿಕ್‌ನಿಂದ ಉರಲ್ ಪರ್ವತ ಶ್ರೇಣಿಯ ನಡುವಿನ ಯುರೋಪ್ ಖಂಡದಲ್ಲಿ ಪಾರಂಪರಿಕ ಶಸ್ತ್ರಾಸ್ತ್ರಗಳಲ್ಲಿ ಕೂಡಾ ಹಂತ ಹಂತವಾಗಿ ಕಡಿತ ತರುವ,

ಕ್ಷಿಪಣಿ ನಿರೋಧಕಗಳ ಮೇಲಿನ ಸಂಧಿಯನ್ನು ತಾನು ಇನ್ನೂ ಕನಿಷ್ಟ 15 ವರ್ಷಗಳ ಕಾಲ ಪಾಲಿಸುವುದಾಗಿ ಏಕಪಕ್ಷೀಯವಾಗಿ ಸೋವಿಯತ್ ಒಕ್ಕೂಟ ವಚನವಿತ್ತಿತ್ತು.

ಅಂತರರಾಷ್ಟ್ರೀಯ ಶಾಂತಿ ಹಾಗೂ ಸದ್ಭಾವನೆಯ ದ್ಯೋತಕವಾಗಿ ಮಾಸ್ಕೋದಲ್ಲಿ Good will games ಯಶಸ್ವಿಯಾಗಿ ನಡೆಯಿತು. ಅತ್ತ ಯುರೋಪ್ ಹಾಗೂ ಅಮೆರಿಕಾದ ಶಾಂತಿ ಚಳುವಳಿಗಳ ಜೊತೆಗೆ ತೃತೀಯ ಜಗತ್ತಿನ ಹಾಗೂ ಯುರೋಪಿನ

ಸ್ವಾಗತಿಸಿ ತಾನು ಏಕಪಕ್ಷೀಯವಾಗಿ ಘೋಷಿಸಿದ ಪರಮಾಣು ಪರೀಕ್ಷಣಾ ನಿರ್ಬಂಧದ ಅವಧಿಯನ್ನು ಮತ್ತೊಮ್ಮೆ ಜನವರಿ 1, 1987ರ ವರೆಗೆ ಮುಂದುವರಿಸಿತು. ಆದರೆ ಅಮೆರಿಕಾದಿಂದ ಈ ಬಗ್ಗೆ ಯಾವ ಪತಿಕ್ರಿಯೆಯೂ ಇಲ್ಲ ಮಾತ್ರವಲ್ಲ. ನೆವಡಾ ಮರಳುಗಾಡಿನಲ್ಲಿ ಏಪ್ರಿಲ್‌ನಿಂದೀಚೆಗೆ 13 ಬಾರಿ ಅಣ್ವಸ್ತ್ರ ಸ್ಫೋಟಗಳನ್ನು ಅಮೇರಿಕದ ಶಾಂತಿಪ್ರಿಯ ಜನತೆಯ ಬಲವಾದ ವಿರೋಧವನ್ನು ಲೆಕ್ಕಿಸದೇ ನಡೆಸಿದರು.

ಸೋವಿಯತ್ ಒಕ್ಕೂಟ ಹಾಗೂ ವಾರ್ಸಾ ದೇಶಗಳ ಇತರ ವಾಸ್ತವಿಕ

> ಶಾಂತಿಯು ನಿಯತಿಯನ್ನು ಸಾಮ್ರಾಜ್ಯ ಶಾಹಿಯ ಮರ್ಜಿಗೆ ಬಿಟ್ಟು ಬಿಡುವುದು ಸಾಧ್ಯವಿಲ್ಲ. ಸೈನಿಕ ರಾಜಕೀಯ ಘರ್ಷಣೆಯನ್ನು ಹೆಚ್ಚಿಸಲು ಮತ್ತು ಅದನ್ನು ಜಗತ್ತಿನ ಮೇಲೆ ಹೇರಲು ನಾವು ಸಾಮ್ರಾಜ್ಯಶಾಹೀ ಪ್ರತಿಗಾಮಿಗಳಿಗೆ ಅವಕಾಶ ನೀಡಲು ಸಾಧ್ಯವಿಲ್ಲ ಯಾಕೆಂದರೆ ಅದರರ್ಥ ಒಂದೇ–ಪರಮಾಣು ವಿಶ್ವಸಮರದ ದಿಕ್ಕಿನಲ್ಲಿ ತೇಲಿ ಹೋಗುವುದು.
>
> –ಮಿಖ್ಯಾಲ್ ಗೋರ್ಬಚೆವ್

ಕೆಲವು ತಟಸ್ಥ ದೇಶಗಳಲ್ಲೂ ಶಾಂತಿ ಚಳುವಳಿಗಳ ಜೊತೆಗೆ ಸರ್ಕಾರಿ ಮಟ್ಟದಲ್ಲೂ ಶಾಂತಿಪ್ರಯತ್ನಗಳು ಮುಂದುವರಿದವು. ಇತ್ತೀಚೆಗೆ ಮೆಕ್ಸಿಕೋದಲ್ಲಿ ನಡೆದ ಭಾರತವೂ ಸೇರಿದಂತೆ ಆರು ದೇಶಗಳ ಶಾಂತಿ ಮತ್ತು ನಿಶ್ಶಸ್ತ್ರೀಕರಣ ಶಿಬಿರ ಸಮ್ಮೇಳನ ಇಂತಹ ಒಂದು ಮುಖ್ಯ ಪ್ರಯತ್ನ. ಈ ಸಮ್ಮೇಳನ ಪರಮಾಣು ಪರೀಕ್ಷಣಾ ನಿರ್ಬಂಧಕ್ಕೆ ಕರೆನೀಡಿ ಸೋವಿಯತ್ ಹಾಗೂ ಅಮೆರಿಕನ್

ಪ್ರಸ್ತಾಪಗಳಿಗೂ ಸಾಮ್ರಾಜ್ಯಶಾಹೀ ಬಣದಿಂದ ಯಾವ ರಚನಾತ್ಮಕ ಪ್ರತಿಕ್ರಿಯೆಯೂ ಬಂದಿಲ್ಲ ಈಗಾಗಲೇ ಇರುವ ಶಸ್ತ್ರಾಸ್ತ್ರ ತಡೆ ಒಪ್ಪಂದಗಳನ್ನು ಪಾಲಿಸಲು ಕೂಡಾ ಅಮೆರಿಕನ್ ಸಾಮ್ರಾಜ್ಯಶಾಹಿಗಳು ಹಿಂದೆಗೆಯುತ್ತಿದ್ದಾರೆ. ಕ್ಷಿಪಣಿ ನಿರೋಧಕ ಶಸ್ತ್ರಾಸ್ತ್ರ ತಡೆ ಒಪ್ಪಂದ, ಶಸ್ತ್ರಾಸ್ತ್ರ ತಡೆ ಒಪ್ಪಂದ

8ನೇ ಪುಟ ನೋಡಿ

'ವರ್ಷಾಂತ್ಯದಲ್ಲಿ 2 ಲಕ್ಷ ರೈತರನ್ನು ಸಂಘಟಿಸುವತ್ತ ಮುಂದಾಗಿ'

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಮಟ್ಟದ ಕಾರ್ಯಕರ್ತರ ತರಬೇತಿ ಶಿಬಿರ ಬೆಂಗಳೂರಿನ ಸಮೀಪದಲ್ಲಿರುವ ತಲಘಟ್ಟಪುರದಲ್ಲಿ ಆಗಸ್ಟ್ 17 ರಿಂದ 21 ರವರೆವಿಗೆ ಏರ್ಪಡಿಸಿದ್ದು, ಇದರ ಅಂಗವಾಗಿ ಆಗಸ್ಟ್ 19 ರಂದು ಮೆರವಣಿಗೆ ಮತ್ತು ಬಹಿರಂಗಸಭೆಯನ್ನು ನಡೆಸಲಾಯಿತು ಅಖಿಲ ಭಾರತ ಕಿಸಾನ್ ಸಭಾದ ಸುವರ್ಣ ಮಹೋತ್ಸವ ಸಮ್ಮೇಳನದ ಕರೆಯಂತೆ ಪ್ರತಿ ಗ್ರಾಮಕ್ಕೂ ರೈತ ಸಂಘದ ಸಂದೇಶವನ್ನು ಕೊಂಡೊಯ್ಯಬೇಕೆಂದು ನೀಡಿದ ಕರೆಯನ್ನು ಜಾರಿಗೊಳಿಸಲು ಅಣಿಯಾಗುವ ದೆಸೆಯಲ್ಲಿ ಈ ಶಿಬಿರ ದಿಟ್ಟ ಹೆಜ್ಜೆಯಾಗಿದೆ. 50 ವರ್ಷಗಳ ತನ್ನ ಸಮರ ಶೀಲ ಹೋರಾಟದ ಅನುಭವ, ಸರ್ಕಾರ ಅನುಸರಿಸುತ್ತಾ ಬಂದಿರುವ ರೈತ ಕಾರ್ಮಿಕ ವಿರೋಧಿ ಧೋರಣೆ, ದುಡಿಯುವ ಜನ ಸಾಮಾನ್ಯರ ಹಿತ ದೃಷ್ಟಿ ಕಡೆಗಣಿಸಿರುವುದರ ಕುರಿತು ಜನತೆಯ ಮುಂದಿಡಬೇಕೆಂದು, ರಾಜ್ಯದಲ್ಲಿ 2ಲಕ್ಷ ಹಾಗೂ ದೇಶಾದ್ಯಂತ 1ಕೋಟಿ ರೈತರನ್ನು ಸಂಘಟನೆಯ ಧ್ವಜದಡಿಯಲ್ಲಿ ತರುವ ಮಹತ್ತರವಾದ ಕಾರ್ಯ ನೆರವೇರಿಸಬೇಕೆಂದು ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿಯವರಾದ ಪಿ. ರಾಮಚಂದ್ರರಾವ್‌ರವರು ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಕರೆ ನೀಡಿದರು. ರೈತ ಸಂಘ ನೀಡಿರುವ ಎಲ್ಲಾ ಹೋರಾಟದ ಕರೆಗಳಿಗೆ ಉತ್ತರ ಕರ್ನಾಟಕದ ರೈತರ ಉತ್ಸಾಹ, ಸ್ಫೂರ್ತಿದಾಯಕವಾದ ಪ್ರತಿಕ್ರಿಯೆಯನ್ನು ತೋರಿಸಿರುವುದನ್ನು ಜ್ಞಾಪಿಸಿದ ರೈತ ಸಂಘದ ಉಪಾಧ್ಯಕ್ಷ ಬೀಮಸೀ ಕಲಾದಗಿಯವರು ರೈತರು ದಿವಾಳಿಯಾಗುತ್ತಿದ್ದು ಉಪವಾಸ ಬೀಳುವಂತಹ ಪರಿಸ್ಥಿತಿ ಇದ್ದರೆ. ಅನ್ಯಾಯ, ಅಕ್ರಮದಲ್ಲಿ ಕಾಂಗ್ರೆ-ಜನತಾ ಮಂತ್ರಿಗಳು ಜಮೀನು ಲಪಟಾಯಿಸುತ್ತಿರುವುದನ್ನು ಮತ್ತೊಂದು ಕಡೆ ನೋಡುತ್ತಿದ್ದೇವೆ ಎಂದು ಮಂತ್ರಿ ಶಾಸಕರ ಕಪಟತನವನ್ನು ಟೀಕಿಸಿದರು.

ಸಮಾಜವಾದಿ ರಷ್ಯಾ ದೇಶದಲ್ಲಿ ರೈತರ ಸಾಮೂಹಿಕ ಬೇಸಾಯ, ಉಚಿತವಾದ ವಿದ್ಯೆ-ಆರೋಗ್ಯ ಉದ್ಯೋಗದ ಹಕ್ಕು ದೊರಕಿದ್ದು ರೈತ ಕಾರ್ಮಿಕರ ಪರವಾದ ಸರ್ಕಾರದಿಂದ ಮಾತ್ರ ಜನತೆಯ ಎಲ್ಲಾ ವಿಧವಾದ ಶೋಷಣೆಗಳು ಕೊನೆಗೊಳ್ಳುತ್ತವೆಂದು ರೈತ ಸಂಘದ ಅಧ್ಯಕ್ಷರಾದ ಕಾಂ. ಎಂ. ಎಸ್ ಉಗ್ರಪ್ಪನವರು ರಷ್ಯಾದ ಅನುಭವವನ್ನು ವಿವರಿಸಿದರು.

ಕಾ|| ಪಿ. ಜಗನ್ನಾಥ್‌ರವರು ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಶಾಸಕರರಾದ ಕಾ|| ಆರ್. ವೆಂಕಟರಾಮಯ್ಯನವರು ಮಾತನಾಡಿ ಭಾರತದ ಬಡತನದ ರೇಖೆ 67% ಮುಟ್ಟಿದೆ. ದೇಶದ 33ಬಂಡವಾಳಶಾಹಿ ಕುಟುಂಬಗಳ ಆಸ್ತಿ ದಿನೇ ದಿನೇ ಏರುತ್ತಿದೆ. ಜನತಾ-ಕಾಂಗ್ರೈಪಕ್ಷಗಳ ಧೋರಣೆಗಳಲ್ಲಿ ಯಾವುದೇ ವ್ಯತ್ಯಾಸ ಕಾಣುತ್ತಿಲ್ಲ ರೈತರಸಮಸ್ಯೆಯ ಕುರಿತುನೇಮಕಗೊಂಡ ಬಂಗಾರಪ್ಪ.ಎಂ. ಪಿ. ಪ್ರಕಾಶ ಸಮಿತಿಗಳ ಶಿಫಾರಸ್ಸುಗಳನ್ನು ಜಾರಿಗೊಳಿಸಿಲ್ಲ, ಬಂಜರು ಭೂಮಿ ಸಾಗುವಳಿಗೆ 22ಸಾವಿರಎಕರೆ ಹೆಚ್ಚುವರಿಭೂಮಿಯನ್ನು ಬಡ ಜನರಿಗೆ ವಿತರಣೆ ಮಾಡಬೇಕೆಂದು ತಾವು ಸದನದಲ್ಲಿ ಒತ್ತಾಯಿಸಿದಾಗ ಅದನ್ನು ಜಾರಿಗೊಳಿಸಲು ಬಿ.ಜೆ.ಪಿಯ ಬಿ. ಬಿ. ಶಿವಪ್ಪನವರನ್ನೊಳಗೊಂಡು ಜನತಾ ಸರ್ಕಾರ ಕೂಡ ಒಪ್ಪಲಿಲ್ಲ. ಇದು ಜನತಾ ಸರ್ಕಾರದ ಜನದ್ರೋಹವೆಂದು ಖಂಡಿಸಿದರು. ಕಾ|| ಎಸ್. ಸೂರ್ಯನಾರಾಯಣ ರಾವ್‌ರವರು ಮಾತನಾಡಿ ರೈತರ ಜಮೀನುಗಳನ್ನು ದೊಡ್ಡ ದೊಡ್ಡ ಬಂಡವಾಳಗಾರ ಮಾಲೀಕರಿಗೆ ಫ್ಯಾಕ್ಟರಿ ಮಾಡಲು ಉದಾರವಾಗಿ ನೀಡಲಾಗುತ್ತಿದೆ. ಮಂತ್ರಿ ಶಾಸಕರುಗಳಿಂದ ಜನತೆ ಸಮಸ್ಯೆ ಬಗೆ ಹರಿಯುವುದಿಲ್ಲ. ರೈತ ಕಾರ್ಮಿಕರು ಸಖ್ಯತೆಯಿಂದ ಒಂದಾಗಿ ಹೋರಾಡಲು ಮುಂದಾಗಬೇಕೆಂದು, ಬಂಜರು ಭೂಮಿಗಾಗಿ ರೈತ ಸಂಘ ನಡೆಸುವ ಹೋರಾಟಕ್ಕೆ ಕಾರ್ಮಿಕರು ಸಂಪೂರ್ಣವಾದ ಬೆಂಬಲ ನೀಡುವುದಾಗಿ ಘೋಷಿಸಿದರು. ಭಾರತದ ಸಂವಿಧಾನ ಸುಮಾರು400 ತಿದ್ದುಪಡಿ 2,700 ಶಾಸನಗಳನ್ನೊಳಗೊಂಡಿದ್ದರೂಜನತೆಯ ಮೂಲಭೂತ ಸಮಸ್ಯೆ ಬಗೆಹರಿಸುವ ಯಾವ ಶಾಸನಗಳೂ ಜಾರಿಗೊಂಡಿಲ್ಲ. ಈ ಸಂವಿಧಾನದಿಂದ ಪ್ರಜಾಪ್ರಭುತ್ವ ಸಮಾಜವಾದ ಜಾರಿಗೊಳುತ್ತದೆಂಬ ಭ್ರಮೆ ಬಿಡಬೇಕೆಂದು ಬೆಂಗಳೂರು ಜಿಲ್ಲಾ ರೈತ ಸಂಘದ ಉಪಾಧ್ಯಕ್ಷ ಕಾ|| ಹೆಚ್. ಎನ್. ನಾಗಮೋಹನದಾಸ್‌ರವರು ಹೇಳಿದರು. ಸಭೆಯ ಪ್ರಾರಂಭದಲ್ಲಿ ಕಾ|| ಲಕ್ಕಣ್ಣ ಸ್ವಾಗತಿಸಿದರು.

ಪ್ರಾಂತ ರೈತ ಸಂಘದ ಕೋಲಾರ ಜಿಲ್ಲಾ 9ನೇ ಸಮ್ಮೇಳನ

ಕರ್ನಾಟಕ ಪ್ರಾಂತ ರೈತ ಸಂಘದ ಕೋಲಾರ ಜಿಲ್ಲಾ ರೈತ ಸಮ್ಮೇಳನವು ಆಗಸ್ಟ್ 5,6,7 ರಂದು ಬಾಗೇಪಲ್ಲಿ ತಾಲ್ಲೂಕಿನ ಗಡಿದಂನಲ್ಲಿ ನೇರವೇರಿತು. ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿಯವರಾದ ಪಿ. ರಾಮಚಂದ್ರರಾವ್ ರವರು ಉದ್ಘಾಟಿಸಿದರು. ಎ. ವಿ. ಅಪ್ಪಸ್ವಾಮಿ ರೆಡ್ಡಿಯವರು ಧ್ವಜಾರೋಹಣ ಮಾಡಿದರು.

ಜಿಲ್ಲೆಯ 11 ತಾಲ್ಲೋಕುಗಳ ಪೈಕಿ 9 ತಾಲ್ಲೋಕುಗಳಿಂದ ಆಯ್ಕೆಯಾಗಿದ್ದ 96 ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು. ಸ್ವಾಗತ ಸಮಿತಿ ಪರವಾಗಿ ಜಿ. ವಿ. ಶ್ರೀರಾಮ ರೆಡ್ಡಿಯವರು ಸ್ವಾಗತಿಸಿದರು. ಆರ್. ವೆಂಕಟರಾಮಯ್ಯ ಜಿ. ವಿ. ಅಶ್ವಥನಾರಾಯಣ ರೆಡ್ಡಿ, ಲಕ್ಷ್ಮಯ್ಯ, ಕೆ.ಎಂ. ವೆಂಕಟೇಶ ರವರನ್ನೊಳಗೊಂಡ ಅಧ್ಯಕ್ಷ ಮಂಡಳಿ ಸಮ್ಮೇಳನದ ಕಾರ್ಯಕಲಾಪಗಳನ್ನು ನಡೆಸಿತು. ಜಿಲ್ಲಾ ಸಮಿತಿ ಪರವಾಗಿ ಕೆ.ಎಂ. ವೆಂಕಟೇಶ ರವರು ಕಳೆದ ಮುಳಬಾಗಿಲು ಸಮ್ಮೇಳನದ ನಂತರದ 4 ವರ್ಷಗಳ ವರದಿಯನ್ನು ಮಂಡಿಸಿದರು. ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಯವರಾದ ಎನ್.ಶಂಕರಯ್ಯನವರು ಸಮ್ಮೇಳನದ ಸಮಾರೋಪ ಭಾಷಣ ಮಾಡಿದರು.

ನೂತನ ಕೋಲಾರ ಜಿಲ್ಲಾ ಸಮಿತಿಗೆ ಆರ್.ವೆಂಕಟರಾಮಯ್ಯ (ಅಧ್ಯಕ್ಷ), ಜಿ.ವಿ. ಅಶ್ವಥನಾರಾಯಣರೆಡ್ಡಿ (ಕಾರ್ಯದರ್ಶಿ), ಎ.ವಿ. ಅಪ್ಪಸ್ವಾಮಿರೆಡ್ಡಿ, ಲಕ್ಷ್ಮಯ್ಯ (ಉಪಾಧ್ಯಕ್ಷರು) ಜಿ.ವಿ. ಶ್ರೀರಾಮರೆಡ್ಡಿ (ಜಂಟಿ ಕಾರ್ಯದರ್ಶಿ) ಕೆ.ಎಂ. ವೆಂಕಟೇಶ (ಖಜಾಂಚಿ) ಆಗಿ ಆರಿಸ್ಪಟ್ಟರು ಸಮ್ಮೇಳವದ ಕೊನೆಯ ದಿನ ತಾಲ್ಲೋಕಿನ ವಿವಿಧ ಗ್ರಾಮಗಳಿಂದ ಬಂದ ಸುಮಾರು 5ಸಾವಿರ ಜನ ರೈತರ ಬೃಹತ್ ರ‍್ಯಾಲಿನಡೆಸಿ ರೈತ ಚಳುವಳಿಯಲ್ಲಿ ಹುತಾತ್ಮರಾದ ರೈತರ ಸ್ಮಾರಕದ ಎದುರು ಶ್ರದ್ಧಾಂಜಲಿ ಅರ್ಪಿಸಿ ಗೂಳೂರು ವೃತ್ತದ ಮೈದಾನದಲ್ಲಿ ಬಹಿರಂಗ ಸಭೆ ಏರ್ಪಡಿಸಲಾಯಿತು.

ಬಹಿರಂಗ ಸಭೆಯನ್ನುದ್ದೇಶಿಸಿ ಎನ್. ಶಂಕರಯ್ಯನವರು, ಪಿ. ರಾಮಚಂದ್ರರಾವ್, ಎಂ.ಎಸ್. ಉಗ್ರಪ್ಪ ಎಸ್. ಸೂರ್ಯ ನಾರಾಯಣರಾವ್, ಜಿ.ವಿ. ಅಶ್ವಥನಾರಾಯಣರೆಡ್ಡಿ. ಎ.ವಿ ಅಪ್ಪಸ್ವಾಮಿ ರೆಡ್ಡಿಯವರುಗಳು ಮಾತನಾಡಿದರು. ಆರ್. ವೆಂಕಟರಾಮಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಜಿ.ವಿ. ಶ್ರೀರಾಮರೆಡ್ಡಿಯವರು ಪ್ರಾರಂಬದಲ್ಲಿ ಸ್ವಾಗತಿಸಿದರು. ಬಹಿರಂಗ ಸಭೆಯ ಕೊನೆಯಲ್ಲಿಆಂಧ್ರದಪ್ರಜಾನಾಟ್ಯ ಮಂಡಳಿಯಿಂದ "ಬುರ್ರಕಥಾ" ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಆಟೋ ಮುಷ್ಕರ ವಾಪಸ್

ಆಟೋರಿಕ್ಷಾ ಡ್ರೈವರ್ಸ್ ಯೂನಿಯನ್, ಬೆಂಗಳೂರು, ರವರು ಮುಖ್ಯ ಬೇಡಿಕೆಯಾದ ಪರ್ಮಿಟ್ ರೀಗ್ರಾಂಟ್ ಮತ್ತು ಫ್ಲಾಗ್ ಮೀಟರ್ ಅಳವಡಿಕೆ ಬಗ್ಗೆ ಸರ್ಕಾರದ ಪತಿಯಿಂದ ಸ್ಪಷ್ಟವಾದ ತೀರ್ಮಾನ ಬಂದಿದ್ದುದರಿಂದ 18-8-86 ರಿಂದ ಅನಿರ್ಧಿಷ್ಟ ಕಾಲ ಉಪವಾಸ ಮುಷ್ಕರ ಮತ್ತು ಆಗಸ್ಟ್ 20 ರಂದು ಆಟೋ ರಿಕ್ಷಾ ಮುಷ್ಕರ ಮಾಡಬೇಕೆಂದು ತೀರ್ಮಾನ ಕೈಗೊಂಡಿತ್ತು. ತಾ 18 ರಂದು ಸಾರಿಗೆ ಸಚಿವರ ವಿನಂತಿ ಮೇರೆಗೆ ಜಂಟಿ ಚರ್ಚೆ ನಡೆಯಿತು.

ಮಾತುಕತೆಯಲ್ಲಿ ಸರ್ಕಾರ ಪರ್ಮಿಟ್ ರಿನ್ಯೂವಲ್ ಮಾಡುವಾಗ ಪರ್ಮಿಟ್ ಯಾರ ಹೆಸರಿನಲ್ಲಿದೆಯೋ ಅವರೇ ಖುದ್ದಾಗಿ ಬರಬೇಕೆಂಬ ಷರತ್ತನ್ನು ಕೈಬಿಟ್ಟಿದೆ. ದಸ್ತಾವೇಜುಗಳು ಸರಿಯಾಗಿದ್ದಲ್ಲಿ ಅವರಿಗೆ ರಿನ್ಯೂವಲ್ ಮಾಡುತ್ತೇವೆ ಎಂದು ಹೇಳಿ ಸಂಘದ ಬೇಡಿಕೆಯನ್ನು ಮಾನ್ಯ ಮಾಡಿತು. ಸೆಪ್ಟೆಂಬರ್ 1 ರಿಂದ ಎಫ್. ಸಿ ಗೆ ಹೋಗುವ ಆಟೋರಿಕ್ಷಾಗಳಿಗೆ ಮತ್ತು ಪರ್ಮಿಟ್ ನವೀಕರಣ, ವರ್ಗಾವಣೆ ಸಂದರ್ಭದಲ್ಲಿ ಫ್ಲಾಗ್ ಮೀಟರ್‌ಗಳನ್ನು ಅಳವಡಿಸಬೇಕೆಂಬ ನಿಲುವನ್ನು ಸರ್ಕಾರ ಬದಲಿಸಿ ಒಂದು ವರ್ಷದ ವರೆಗೆ ಅಂದರೆ 31-8-87ರ ವರೆಗೆ ಒತ್ತಾಯ ಮಾಡುವುದಿಲ್ಲವೆಂದು, ಮೀಟರ್ ಕೊಳ್ಳಲು ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಕೊಡಿಸಲು ಸರ್ಕಾರಕ್ಕೆ ಆದೇಶ ಕೊಡುತ್ತೇವೆ ಎಂದು, ಬ್ಯಾಂಕುಗಳಿಗೆ ಕಟ್ಟಬೇಕಾದ ಸಾಲವನ್ನು 18 ತಿಂಗಳ ಕಂತಿನಲ್ಲಿ ವಾಪಸ್ ಪಡೆಯುತ್ತದೆ ಎಂದು ಸಚಿವರು ಮತ್ತು ಸಾರಿಗೆ ಆಯುಕ್ತರು ತಿಳಿಸಿದರು.

ಸಾರ್ವಜನಿಕರಿಗೂ ಆಟೋ ಚಾಲಕರಿಗೂ ತೊಂದರೆಯಾಗಬಾರದೆಂಬ ದೃಷ್ಟಿಯಿಂದ ಇಂದು ಇದನ್ನು ಒಪ್ಪಿಕೊಳ್ಳಲಾಯಿತು. ಪರ್ಮಿಟ್ ರೀಗ್ರಾಂಟ್ ಬೇಡಿಕೆ ಸರ್ಕಾರ ಮಾನ್ಯ ಮಾಡಿರುವುದರಿಂದ ಫ್ಲಾಗ್ ಮೀಟರ್ ಹಾಕಲು ಒಂದು ವರ್ಷ ಕಾಲಾವಕಾಶವನ್ನು ಕೊಟ್ಟು, ಹಣ ಸಹಾಯದ ಭರವಸೆಯನ್ನು ನೀಡಿರುವುದರಿಂದ ನಿಯೋಜಿತವಾಗಿದ್ದ ಅನಿರ್ದಿಷ್ಟ ಕಾಲದ ಉಪವಾಸ ಸತ್ಯಾಗ್ರಹ ಮತ್ತು ತಾ 20-8-86ರ ಆಟೋ ಮುಷ್ಕರವನ್ನು ರದ್ದುಪಡಿಸಲಾಗಿದೆ, ಸಿ. ಐ. ಟಿ ಯು ಅಧ್ಯಕ್ಷರಾದ ಎಸ್. ಸೂರ್ಯನಾರಾಯಣರಾವ್ ಪತ್ರಿಕಾ ಹೇಳಿಕೆ ಹೊರಡಿಸಿದ್ದಾರೆ.

ವಿದ್ಯಾರ್ಥಿಗಳ ಹೋರಾಟಕ್ಕೆ ಜಯ

ಹರಪನ ಹಳ್ಳಿಯ ಸಮುದಾಯ ಘಟಕದ ಕಾರ್ಯದರ್ಶಿಯೂ, TMAE ಸಂಸ್ಥೆಯ ಬಿ. ಎಡ್. ಕಾಲೇಜಿನ ಅಧ್ಯಾಪಕರಾದ ಡಿ. ಬಿ. ಬಡಿಗೇರ್ ಅವರನ್ನು ಸಂಸ್ಥೆಯ ಆಡಳಿತ ಮಂಡಳಿ ವಿನಾಕಾರಣ ವರ್ಗಾವಣೆ ಮಾಡಿದ್ದನ್ನು ಪ್ರತಿಭಟಿಸಿ, ಅದನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಿ, ಸಹಿ ಮಾಡಿದ ಮೊತ್ತಕ್ಕೆ ಅಧ್ಯಾಪಕರಿಗೆ ಸಂಬಳ ನೀಡಬೇಕೆಂದು ಒತ್ತಾಯಿಸಿ ಎಸ್. ಎಫ್. ಐ. ನೇತೃತ್ವದಲ್ಲಿ ಬಿ. ಎಡ್; ಟಿ. ಸಿ. ಎಚ್. ಕಾಲೇಜಿನ ವಿದ್ಯಾರ್ಥಿಗಳು ಪ್ರತಿಭಟನಾ ಪ್ರದರ್ಶನ ನಡೆದರು ಆಡಳಿತ ವರ್ಗವು ಅಧ್ಯಾಪಕರ ಮತ್ತು, ವಿದ್ಯಾರ್ಥಿಗಳ ಐಕ್ಯ ಶಕ್ತಿಗೆ ಮಣಿದು ಬೇಡಿಕೆಗಳನ್ನು ಈಡೇರಿಸಲು ಒಪ್ಪಿಕೊಂಡಿದ್ದಾರೆ.

ಈ ಹೋರಾಟಕ್ಕೆ ಕರ್ನಾಟಕ ಪ್ರಾಂತ ರೈತ ಸಂಘ, ಸಿ.ಐ.ಟಿ.ಯು ಮತ್ತುಸಮುದಾಯಬೆಂಬಲ ನೀಡಿದ್ದವು

ನೂತನ ಶಿಕ್ಷಣ ನೀತಿವಿರುದ್ಧ ಬಳ್ಳಾರಿಜಿಲ್ಲೆ ಕಾರ್ಯಕ್ರಮಗಳು

ಎಸ್. ಎಫ್. ಐ. ರಾಜ್ಯ ಸಮಿತಿಯು ನೀಡಿದ ಕರೆಯಂತೆ ಬಳ್ಳಾರಿ ಜಿಲ್ಲೆಯ ವಿವಿಧ ಕಡೆಗಳಲ್ಲಿ ಎಸ್. ಎಫ್. ಐ. ಘಟಕಗಳು ಕಾರ್ಯ ಕ್ರಮಗಳನ್ನು ನಡೆಸಿದ ಬಗ್ಗೆ ವರದಿಯಾಗಿದೆ.

ಜುಲೈ 25 ರಂದು ಹೊಸಪೇಟೆಯ ವಾಲ್ಮೀಕಿ ಹೈಸ್ಕೂಲಿನ ಒಳಾಂಗಣದಲ್ಲಿ ವಿದ್ಯಾರ್ಥಿಗಳ ಸಭೆ ನಡೆಯಿತು ಸಭೆಯಲ್ಲಿ ಜಿಲ್ಲಾ ಸಮಿತಿ ಸದಸ್ಯ ಕಾ. ಕಾಶಿಂ ಅಲಿ ಮತ್ತು ಜಿಲ್ಲಾ ಕಾರ್ಯದರ್ಶಿ ಕಾ ಗುರುಶಾಂತ ಮಾತನಾಡಿದರು. ಈ ಸಭೆಯಲ್ಲಿ ಶಿಕ್ಷಕರೂ ಸಹ ಹಾಜರಿದ್ದರೆಂದೂ ಸುಮಾರು 400 ವಿದ್ಯಾರ್ಥಿಗಳು ಭಾಗವಹಿಸಿದ್ದರೆಂದೂ ವರದಿಯಾಗಿದೆ. ಅಲ್ಲದೆ ನಗರದ ಪಟೇಲ್ ಹೈಸ್ಕೂಲ್, ವಿದ್ಯಾರ್ಥಿನಿಯರ ಜೂನಿಯರ್ ಕಾಲೇಜ್ ಹಾಗೂ ಕಾಲೇಜು ಮಟ್ಟದ ಹಾಸ್ಟೆಲ್‌ನಲ್ಲಿಯೂ ಸಭೆಗಳು ನಡೆದಿವೆಯೆಂದು ವರದಿಯಾಗಿದೆ.

ಎಂ. ಎಂ. ಹಳ್ಳಿಯ ಘಟಕವೂ ಸಹ ನೂತನ ಶಿಕ್ಷಣ ನೀತಿಯನ್ನು ವಿರೋಧಿಸಿ ಕೇಂದ್ರ ಸರ್ಕಾರಕ್ಕೆ ತಂತಿ ಕಳಿಸಿದೆ

ಹರಪನ ಹಳ್ಳಿಯ ಎಸ್.ಎಫ್.ಐ. ಘಟಕ ನೂತನ ಶಿಕ್ಷಣ ನೀತಿಯ ಬಗ್ಗೆ ವಿಚಾರ ಸಂಕಿರಣ ಏರ್ಪಡಿಸಿತ್ತು. ಅಧ್ಯಾಪಕರಾದ ಶ್ರೀ ಬಾಲರಾಜು ಮತ್ತು ಬಿ ಎಡ್ ಕಾಲೇಜ್‌ನ ಅಧ್ಯಾಪಕರಾದ ಶ್ರೀ ಬಡಿಗೇರ್ ವಿಷಯದ ಕುರಿತು ಮಾತನಾಡಿದರು.

ಸಿ.ಐ.ಟಿ.ಯು.ಗೆ ಜಯ

ಬೆಂಗಳೂರು ನಗರದ ಯಲಹಂಕ ಸಮೀಪದಲ್ಲಿರುವ ಎ ಸ್ಟ್ಯಾಕ್ಟ್ ಕಾರ್ಖಾನೆ ಕಾರ್ಮಿಕರು ಈ ವರ್ಷ ಶೇ. 20 ಬೋನಸ್ಸು ಪಡೆಯಲಿದ್ದಾರೆ. ಸಿ. ಐ. ಟಿ ಯು. ನೇತೃತ್ವದ ಕಾರ್ಮಿಕ ಸಂಘದ ಅಧ್ಯಕ್ಷ ಎಸ್. ಸೂರ್ಯ ನಾರಾಯಣರಾವ್ ಹಾಗೂ ಆಡಳಿತ ವರ್ಗದ ನಡುವೆ ಇತ್ತೀಚೆಗೆ ನಡೆದ ಮಾತು ಕತೆಯಲ್ಲಿ ಈ ಒಪ್ಪಂದಕ್ಕೆ ಬರಲಾಗಿದೆ.

ಐ. ಎನ್. ಟಿ, ಯು. ಸಿ, ಸಂಘ ಕಾರ್ಖಾನೆಯಲ್ಲಿ ಇರುವಾಗ ಕಾರ್ಮಿಕರು ಕೇವಲ 2:0 ರೂ. ಸಂಬಳ, 8.33% ಬೋನಸ್ಸು ಪಡೆಯುತ್ತಿದ್ದು ಕೂಲಿಯ ಕಡಿತ ಮುಂತಾದ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದ ಕಾರ್ಮಿಕರು ಬೇಸತ್ತು ಸಿ ಐ ಟಿ ಯು ಸಂಘ ಸ್ಥಾಪಿಸಿದರು. ಸಿ.ಐ.ಟಿ ಯು ಹೋರಾಟದ ಫಲವಾಗಿ ಪ್ರಸಕ್ತ ಸಾಲಿನಲ್ಲಿ 325 ರೂ. ಪರಿಷ್ಕೃತ ವೇತನ ಹಾಗು ಶೇ. 20 ರಷ್ಟು ಬೋನಸ್ಸು ಪಡೆದರು.

ಬಳ್ಳಾರಿ : ಕೊಳಚೆ ಪ್ರದೇಶದ ಜನರ ಹೋರಾಟ

ಬಹುದಿನಗಳಿಂದಲೂ ನೆನೆಗುದಿಗೆ ಬಿದ್ದಿರುವ ಬಳ್ಳಾರಿಯ ಮಹಾನಂದಿ ಕೊಟ್ಟಂ ಪ್ರದೇಶವನ್ನು ಕೊಳಚೆ ಪ್ರದೇಶವೆಂದು ಕೂಡಲೇ ಸರ್ಕಾರವು ಘೋಷಿಸಬೇಕೆಂದು ಡಿ.ವೈ ಎಫ್.ಐ. ನೇತೃತ್ವದಲ್ಲಿ ಅಲ್ಲಿನ ನಿವಾಸಿಗಳು ದಿನಾಂಕ 11-8-86 ರಂದು ಕೊಳಚೆ ನಿರ್ಮೂಲನಾ ಮಂಡಳಿಯ ಕಛೇರಿಯ ಕೆಲಸಗಳು ನಡೆಯದಂತೆ ಸುಮಾರು ನಾಲ್ಕುವರೆ ಗಂಟೆಗಳ ಕಾಲ ಪಿಕೆಟಿಂಗ್ ಮಾಡುವ ಮೂಲಕ ಸರ್ಕಾರದ ವಿಳಂಬ ನೀತಿಯನ್ನು ತೀವ್ರವಾಗಿ ಪ್ರತಿಭಟಿಸಿದರು.

ಈ ಹೋರಾಟದಲ್ಲಿ ಪಾಲ್ಗೊಂಡ ಮಹಿಳೆಯರನ್ನೊಳಗೊಂಡತೆ 176 ಜನರನ್ನು ಪೋಲೀಸರು ಬಂಧಿಸಿ ಸುಳ್ಳು ಮೊಕದ್ದಮೆಗಳನ್ನು ಹೂಡಿದ್ದಾರೆ. ಪೂರ್ವ ಸೂಚನೆ ನೀಡಿದಾಗ್ಯೂ, ನೀಡಲಿಲ್ಲವೆಂಬುದು ಪೋಲೀಸರ ಕುಂಟು ನೆಪ. ಈ ಸುಳ್ಳು ಮೊಕದ್ದಮೆಗಳನ್ನು ಕೂಡಲೇ ವಾಪಾಸು ಪಡೆಯಬೇಕು ಮತ್ತು ಜನತೆಯ ಬೇಡಿಕೆಗಳನ್ನು ತಕ್ಷಣ ಈಡೇರಿಸಬೇಕೆಂದು ಸಭೆಯಲ್ಲಿ ಒತ್ತಾಯ ಪಡಿಸಲಾಯಿತು. ದಬ್ಬಾಳಿಕೆಯ ಕ್ರಮಗಳನ್ನು ಖಂಡಿಸಲಾಯಿತು. ಸಭೆಯನ್ನುದ್ದೇಶಿಸಿ ಕಾಂ. ಪ್ರಸನ್ನಕುಮಾರ್, ಕಾಂ. ಕೆಂಚಪ್ಪ, ಕಾಂ. ಲಕ್ಷ್ಮಮ್ಮನವರು ಮಾತನಾಡಿದರು. ದಿನಾಂಕ 21-8-86 ಡಿ. ವೈ.ಎಫ್.ಐ. ಕಾರ್ಯದರ್ಶಿ ಕಾಂ: ಶಿವಣ್ಣ ಬಹಿರಂಗ ಸಭೆಯನ್ನುದ್ದೇಶಿಸಿ ಭಾಷಣ ಮಾಡಿದರು. ಅಂದ್ರಾಳ್ . ದಿನಾಂಕ 21-8-86 ರಂದು ಅಂದ್ರಾಳ್ ಡಿ.ವೈ.ಎಫ್.ಐ. ಆಫೀಸಿನಲ್ಲಿ ನಡೆದ ಕಾರ್ಯಕರ್ತರ ಸಭೆಯಲ್ಲಿ ರಾಜ್ಯ ಕಾರ್ಯದರ್ಶಿಗಳಾದ ಕಾಂ: ಶಿವರಾಮ್ ಅವರು ನೂತನ ಶಿಕ್ಷಣ ನೀತಿಯ ಕುರಿತಂತೆ ವಿಶ್ಲೇಷಿಸಿದರು. ಸಂಘಟನಾತ್ಮಕ ವಿಷಯಗಳ ಬಗ್ಗೆ ಕಾಂ. ಪ್ರಸನ್ನಕುಮಾರ್ ಕಾರ್ಯಕ್ರಮದ ಬಗ್ಗೆ ಕಾ. ಜಂಬಯ್ಯ ನಾಯಕ್ ವಿವರಿಸಿದರು.

ಸುಲ್ತಾನಪುರದಲ್ಲಿ ರೈತರಿಂದ ಬಸ್‌ರೋಖೋ ಚಳುವಳಿ

ಸಂಡೂರು ತಾಲ್ಲೂಕು, ಸುಲ್ತಾನ್‌ಪುರ, ಚಿಕ್ಕಅಂತ್‌ಪುರ, ಕೊಟ್ಟಾಲು ಹಳ್ಳಿಗಳಿಗೆ ಬಸ್ ಸೌಲಭ್ಯ ಮತ್ತು ನಾಗರೀಕ ಸೌಲಭ್ಯಗಳಿಗಾಗಿ ಒತ್ತಾಯಿಸಿ ಸುಮಾರು 200 ರಷ್ಟು ರೈತರು ಸುಲ್ತಾನಪುರದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಬಸ್ ರೋಖೋ ಚಳುವಳಿಯನ್ನು ದಿನಾಂಕ 22-8-86 ರಂದು ನಡೆಸಿದರು.

ಜಿಲ್ಲಾ ಸಮಿತಿ ಖಜಾಂಚಿ ಕಾಂ. ಶಂಕರಣ್ಣ, ಕಾ. ಚನ್ನಬಸಯ್ಯ, ಕಾ. ಯು. ಸಣ್ಣಬಸಪ್ಪನವರು ಮಾತನಾಡಿದರು.

ರೈತ ಸಂಘದ ಗ್ರಾಮ ಘಟಕ

ಕರ್ನಾಟಕ ಪ್ರಾಂತ ರೈತ ಸಂಘದ ಆರಾಳಗ್ರಾಮದಲ್ಲಿ ಆಗಸ್ಟ್ 10ರಂದು ರೈತ ಕೂಲಿಕಾರರ ಸಭೆ ನಡೆದು ಕೆಳಕಂಡ ಪಧಾದಿಕಾರಿಗಳನ್ನು ಚುನಾಯಿಸಲಾಗಿದೆ.

ಅಧ್ಯಕ್ಷರು —ರುದ್ರಪ್ಪ ಗಂಗಾವತಿ,
ಉಪಾಧ್ಯಕ್ಷರು—ಎಂ ಹಿ ತಿಪ್ಪನ ಗೌಡ,
ಪ್ರ. ಕಾರ್ಯದರ್ಶಿ—ಜಿ. ವಿರೂಪಾಕ್ಷಪ್ಪ,
ಸ.ಹ ಕಾರ್ಯದರ್ಶಿ—ಎಸ್. ಶಿವನಗೌಡ
ಖಜಾಂಚಿ—ಡಿ. ವಿರೇಶಪ್ಪ
ಸಹಖಜಾಂಚಿ—ಚನ್ನಬಸವನಗೌಡ

ಅಲ್ಲದೆ 15 ಮಂದಿ ಕಾರ್ಯಕಾರೀ ಸಮಿತಿ ಸದಸ್ಯರನ್ನು ಆಯ್ಕೆ ಮಾಡಲಾಗಿದೆಯೆಂದು ಪತ್ರಿಕಾ ಹೇಳಿಕೆ ತಿಳಿಸಿದೆ.

ವಿಕ್ರಾಂತ್ ಟೈರ್ಸ್

ಮೈಸೂರಿನ ವಿಕ್ರಾಂತ್ ಟೈರ್ಸ್ ಕಾರ್ಮಿಕ ಸಂಘ ಹಾಗೂ ಆಡಳಿತ ವರ್ಗದ ನಡುವೆ ನಡೆದ ಮಾತು ಕತೆ ಪರಿಣಾಮವಾಗಿ ಮೊಟ್ಟಮೊದಲ ಬಾರಿಗೆ ಕಾರ್ಮಿಕರು ಶೇ. 15.25 ರಷ್ಟು ಬೋನಸ್ಸು ಪಡೆಯಲಿದ್ದಾರೆ. ಕಳೆದ 5 ವರ್ಷಗಳಿಂದ ಕಾರ್ಖಾನೆ ನಷ್ಟ ಎದುರಿಸುತ್ತಿದೆ ಎಂಬ ಕಾರಣ ನೀಡಿ ಬೋನಸ್ಸು ನೀಡುವುದನ್ನು ತಡೆಹಿಡಿದಿದ್ದ ಆಡಳಿತ ವರ್ಗ ಸಿ ಐ ಟಿಯು. ಮುಂದಿಟ್ಟ ಬೇಡಿಕೆಗೆ ಮಣಿದಿದೆ.

ಹೊಸಪೇಟೆ

ಗಣಕಯಂತ್ರಕ್ಕೆ ಪ್ರತಿಭಟನೆ

ಹೊಸಪೇಟೆಯ ಬಿ ಡಿ ಸಿ.ಸಿ ಬ್ಯಾಂಕ್‌ನಲ್ಲಿ ಗಣಕಯಂತ್ರ ಅಳವಡಿಸುವುದನ್ನು ಹೊಸಪೇಟೆಯ ಎಸ್. ಎಫ್. ಐ. ಡಿವೈಎಫ್‌ಐ. ಕಾರ್ಯಕರ್ತರು ಬಿ.ಇ. ಎಫ್ ಐ, ಎಲ್ ಐ ಸಿ, ಎ ಐ ಬಿ ಇ ಎ ಮೊದಲಾದ ನೌಕರರು ಗಣಕಯಂತ್ರ ಉದ್ಘಾಟಿಸಲು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಸತೀಶಚಂದ್ರನ್ ಅವರು ಆಗಮಿಸಿದಾಗ ಪ್ರತಿಭಟನೆ ವ್ಯಕ್ತಪಡಿಸಿದರು. ನಂತರ ನಡೆದಸಭೆಯಲ್ಲಿ ಎಸ್.ವೈ. ಗುರುಶಾಂತ ಪಿ ಕಲಾಲ್ ಮುಂತಾದವರು ಮಾತನಾಡಿ ಗಣಕೀಕರಣದ ಅಪಾಯವನ್ನು ವಿವರಿಸಿದರು. ಕಾ. ವೈ.ಅನಂತ ಅವರ ಧನ್ಯವಾದ ಅರ್ಪಿಸಿದರು.

ವಾರ್ಷಿಕ ಮಹಾಸಭೆ

ಎಸ್. ಕೆ. ವೀವರ್ಸ್ ಯೂನಿಯನಿನ 45ನೇ ವಾರ್ಷಿಕ ಮಹಾಸಭೆಯು ಮಂಗಳೂರಿನಲ್ಲಿ ನಡೆಯಿತು. ಹಿಂದಿನ ವರ್ಷದ ವರದಿಯನ್ನು ಪೂವಪ್ಪ ಸಾಲಿಯಾನ್ ರವರೂ, ಲೆಕ್ಕಪತ್ರವನ್ನೂ ಕೆ. ಮಾರಪ್ಪ ಅವರು ಸಭೆಯಲ್ಲಿ ಮಂಡಿಸಿದರು. ಮುಂದಿನ ವರ್ಷಕ್ಕೆ ತಿಮ್ಮಪ್ಪ (ಅಧ್ಯಕ್ಷ) ಕೆ ಪೂವಪ್ಪ ಸಾಲಿಯಾನ್ (ಪ್ರ.ಕಾರ್ಯದರ್ಶಿ), ಕೆ. ಪಕೀರ, ಕೃಷ್ಣ ಶೆಟ್ಟಿ (ಜೊತೆ ಕಾರ್ಯದರ್ಶಿಗಳು)ಹಾಗೂ ಕೆ. ಮಾರಪ್ಪ (ಖಜಾಂಚಿ)ಕೆ.ಮೂಸಬ್ಬ ಕೆ. ವೀರಪ್ಪ ಉಪಾಧ್ಯಕ್ಷ ಅವರನ್ನೊಳಗೊಂಡ 17 ಮಂದಿಯ ಕಾರ್ಯಕಾರೀ ಸಮಿತಿಯನ್ನು ಚುನಾಯಿಸಲಾಗಿದೆ.

ವಿವಾಹ

ಕುಪ್ಪೆಪದವು ಪ್ರದೇಶದ ಸಿ ಪಿ. ಐ. (ಎಂ) ಪಾರ್ಟಿ ಶಾಖೆ ಸದಸ್ಯರಾದ ಕೆ. ಹಾಮದ್ ಅವರ ತಮ್ಮ ಸುಲೈಮಾನ್‌ರವರು ವಿವಾಹವಾಗಿದ್ದು ಇತ್ತೀಚೆಗೆ ತಮ್ಮ ಮದುವೆಯ ಸವಿನೆನಪಿಗಾಗಿ ವಿಶ್ವರಂಗ ಪತ್ರಿಕೆಗೆ 25 ರೂ ಧನ ಸಹಾಯ ನೀಡಿರುತ್ತಾರೆ.

ವಿದ್ಯಾರ್ಥಿ ಚಳುವಳಿಯ ಸುವರ್ಣಮಹೋತ್ಸವ

ಸಂಘಟಿತ ವಿದ್ಯಾರ್ಥಿ ಚಳುವಳಿಯ ಸುವರ್ಣ ಮಹೋತ್ಸವ ಸಮಾರಂಭ ಎಸ್. ಎಫ್ ಐ. ಕುಂದಾಪುರ ನಗರ ಸಮಿತಿ ಆಶ್ರಯದಲ್ಲಿ ಆಗಸ್ಟ್ 14 ರಂದು ನಡೆಯಿತು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಎಸ್.ಎಫ್ ಐ. ನ ರಾಜ್ಯ ಸಹಕಾರ್ಯದರ್ಶಿ ಕಾ. ಕೆ. ವಿಶ್ವನಾಥ ಅವರು ಸ್ವಾತಂತ್ರ್ಯ ಸಮರದಲ್ಲಿ ವಿದ್ಯಾರ್ಥಿಗಳು ವಹಿಸಿದ ಪಾತ್ರ, ವಿದ್ಯಾರ್ಥಿ ಚಳವಳಿ ಸಂಘಟಿತ ರೂಪವನ್ನು ಪಡೆದುಕೊಂಡ ಹಿನ್ನೆಲೆ ಮುಂತಾದ ಬಗ್ಗೆ ಮಾತನಾಡಿದರು. ಮುಖ್ಯ ಅತಿಥಿಯಾಗಿದ್ದ ಭಂಡಾರ್ಕರ್ ಕಾಲೇಜಿನ ಅಧ್ಯಾಪಕರಾದ ಟಿ. ಆರ್. ಮಂಜುನಾಥ ಪ್ರಗತಿಪರ ಸಂಘಟನೆಗಳ ಮುಖಂಡರ ಪ್ರಜಾಪ್ರಭುತ್ವಗೊಳಿಸುವ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳು ಪಾಲ್ಗೊಳ್ಳಬೇಕೆಂದು ಕರೆ ನೀಡಿದರು. ಸಿ ಐ ಟಿ.ಯು. ಮುಖಂಡರಾದ ಕಾ.ಕೆ. ಶಂಕರ್ ಅವರೂ ಸಹ ಸಭೆಯನ್ನುದ್ದೇಶಿಸಿ ಮಾತನಾಡಿದರು. ಯು. ರಮಾನಾಥ ಸ್ವಾಗತಿಸಿ, ಕೆ ನಾರಾಯಣ ವಂದಿಸಿದರು,

ಫೌಂಡ್ರಿ ಕಾರ್ಮಿಕರ ಮುಷ್ಕರ

ಭದ್ರಾವತಿಯ ರಾಜರಾಜೇಶ್ವರಿ ಫೌಂಡ್ರಿಯ ಹೋರಾಟ ನಿರತ ಕಾರ್ಮಿಕರಿಗೆ ಬೆಂಬಲ ನೀಡಿ, ಅನ್ಸಿಲರಿ ಯೂನಿಟ್ ಫೌಂಡ್ರಿ ಕಾರ್ಮಿಕರು ಆಗಸ್ಟ್ 21 ರಂದು ಒಂದು ದಿನದ ಸಾಂಕೇತಿಕ ಮುಷ್ಕರ ನಡೆಸಿರುವುದಾಗಿ ವರದಿಯಾಗಿದೆ. ಸುಮಾರು 500 ಮಂದಿ ಕಾರ್ಮಿಕರು ಬೃಹತ್ ಮೆರವಣಿಗೆ ನಡೆಸಿ ತಹಸೀಲ್ದಾರರಿಗೆ ಮನವಿ ಸಲ್ಲಿಸಿದರು. ರಾಜರಾಜೇಶ್ವರಿ ಫೌಂಡ್ರಿಯ ವಜಾ ಆಗಿರುವ 9 ಮಂದಿ ಕಾರ್ಮಿಕರನ್ನು ಬೇಶರತ್ತಾಗಿ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಮನವಿಯಲ್ಲಿ ಒತ್ತಾಯಿಸಲಾಗಿದೆ. ಕಾರ್ಮಿಕರಿಗೆ ಆಗಿರುವ ಅನ್ಯಾಯವನ್ನು ಕೂಡಲೇ ಸರಿಪಡಿಸದಿದ್ದರೆ ಸೆಪ್ಟಂಬರ್ 5 ರಿಂದ ಅನಿರ್ದಿಷ್ಟ ಕಾಲದ ಮುಷ್ಕರ ಪ್ರಾರಂಭಿಸುವುದಾಗಿ ಭದ್ರಾವತಿಯ ಜನರಲ್ ಎಂಪ್ಲಾಯಿಸ್ ಮತ್ತು ಹಮಾಲಿ ಕಾರ್ಮಿಕರ ಸಂಘ (ಸಿ ಐ ಟಿ ಯು) ತನ್ನ ಪ್ರಕಟನೆಯಲ್ಲಿ ತಿಳಿಸಿದೆ.

ಬೀಡಿ ಕಾರ್ಮಿಕರ ಪ್ರತಿಭಟನೆ

ಪ್ರಾವಿಡೆಂಟ್ ಫಂಡಿನ ಹಣದ ರಶೀದಿ, ಕೆಲಸ ಕೊಡದ ದಿನಸ ಲೇಆಫ್ ಸಿಗಬೇಕೆಂದೂ, ಕಡಿಮೆ ಕನಿಷ್ಟ ಕೂಲಿ ನಿರ್ಧರಿಸಿದ ರಾಜ್ಯ ಸರ್ಕಾರದ ನೀತಿಯನ್ನು ಪ್ರತಿಭಟಿಸಿ ಕುಂದಾಪುರ ಕೆಲಸಗಾರರ ಸಂಘದ ನೇತೃತ್ವದಲ್ಲಿ ಬೀಡಿ ಕಾರ್ಮಿಕರು ತಹಶೀಲದಾರ್ ಕಚೇರಿ ಮುಂದೆ ಮತ ಪ್ರದರ್ಶನ ಮಾಡಿ ಮನವಿ ಅರ್ಪಿಸಿದ ವರದಿ ಬಂದಿದೆ.

ಅಲ್ಲಿ ನಡೆದ ಸಭೆಯನ್ನುದ್ದೇಶಿಸಿ ಸಿ. ವಿ. ಮಹಾಬಲ, ಅಬ್ರಾಹಂ ಕರ್ಕಡ, ಕೆ. ಶಂಕರ ಅವರು ಬೀಡಿ ಕಾರ್ಮಿಕರ ಸಮಸ್ಯೆ ಕುರಿತು ಮಾತಾಡಿ ಹೆಚ್ಚಿನ ಹೋರಾಟಕ್ಕೆ ಸಿದ್ಧರಾಗಬೇಕೆಂದು ಕರೆ ನೀಡಿದರು

ಸಮುದಾಯ ಸಭೆ

ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ಸಮುದಾಯ ಘಟಕದ ವಾರ್ಷಿಕದ ಮಹಾಸಭೆ ಜುಲೈ 27 ರಂದು ನಡೆದು ಶ್ರೀ ಎಚ್. ಎಂ. ಕೊಟ್ರೇಶ್ ಅಧ್ಯಕ್ಷರಾಗಿ ಎಚ್. ಎಂ, ಮಲ್ಲಯ್ಯ ಉಪಾಧ್ಯಕ್ಷರಾಗಿ, ಚಂದ್ರಶೇಖರ ಬೆನ್ನೂರು ಪ್ರಧಾನ ಕಾರ್ಯದರ್ಶಿಯಾಗಿ, ನಾಗೆಂದ್ರ ನಾಯಕ್ ಜತೆ ಕಾರ್ಯದರ್ಶಿಯಾಗಿ, ಹೆಚ್. ಶೇಷಗಿರಿರಾವ್ ಸಂಘಟನಾ ಕಾರ್ಯದರ್ಶಿಯಾಗಿಮತ್ತು ಅಜಿತ್ ಸಿಂಗ್ ಖಜಾಂಚಿಯಾಗಿ ಸರ್ವಾನುಮತದಿಂದ ಆಯ್ಕೆಯಾದರೆಂದು ಪ್ರಕಟನೆತಿಳಿಸಿದೆ.

ಕುಂದಾಪುರ

ಹಂಚಿನ ಕೆಲಸಗಾರರ ವಾರ್ಷಿಕ ಸಭೆ

ಕುಂದಾಪುರ ವಿಭಾಗದ ಹಂಚಿನ ಕೆಲಸಗಾರರ ವಾರ್ಷಿಕ ಸಭೆ 17-8-86 ರಂದು ಅಬ್ರಾಹಂ ಕರ್ಕಡ ಅವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಸಿ.ನಾರಾಯಣ ಅವರು ಸ್ವಾಗತಿಸಿ ವರದಿ ಮಂಡಿಸಿದರು.

ಕೆ.ವಿಶ್ವನಾಥ (ಎಸ್ ಎಫ್ ಐ) ಶಂಕರ ಕಾ ವೇ (ಡಿ.ವೈ.ಎಫ್ ಐ) ಎ.ಎಚ್. ಕರುಣಾಕರ (ರಿಕ್ಷಾಚಾಲಕರ ಸಂಘ) ಅವರು ಶುಭ ಹಾರೈಸಿದರು.

ಹಂಚಿನ ಮಜೂರರಿಗೆ ಕನಿಷ್ಟ ಕೂಲಿ ಮತ್ತು ತುಟ್ಟಿ ಭತ್ತೆ ಈವರೆಗೂ ಸರಕಾರ ನಿರ್ಣಯ ಮಾಡದಿರುವುದನ್ನು ಖಂಡಿಸುವ,ಕಾನೂನವೆಲ್ಲ ಕಾರ್ಖಾನೆ ಕಾರ್ಮಿಕರ ಹೋರಾಟಕ್ಕೆ ಬೆಂಬಲ ನೀಡುವ ನಿರ್ಣಯಗಳು ಪಾಸಾದವು.

ಕೆ.ಶಂಕರ, ಶಿವಾನಂದ ಕೋಡಿ ದ.ಕ.ಹಂಚಿನ ಮಜೂರ ಸಂಘದ ಅಧ್ಯಕ್ಷ ಕೆ.ಆರ್.ಶ್ರಿಯಾನ್ ಮೊದಲಾದವರು ಹಂಚಿನ ಕೆಲಸಗಾರರ ಸಮಸ್ಯೆಗಳ ಕುರಿತು ಮಾತಾಡಿ ಐಕ್ಯ ಹೋರಾಟಕ್ಕೆ ತಯಾರಾಗಬೇಕೆಂದು ಕರೆ ನೀಡಿದರು.

ರೈತರ ವಿಧಾನ ಸೌಧ ಚಲೋ ಕಾರ್ಯಕ್ರಮಕ್ಕೊಂದು

ಕರಪತ್ರದ ಮಾದರಿ

'ವಿಧಾನ ಸೌಧ ಚಲೋ'

ಬಂಧುಗಳೇ

ಕರ್ನಾಟಕ ಪ್ರಾಂತ ರೈತ ಸಂಘ, ರಾಜ್ಯದ ರೈತ-ಕೃಷಿಕೂಲಿಗಾರರ ಮೂಲಭೂತ ಮತ್ತು ತುರ್ತಿನ ಸಮಸ್ಯೆಗಳನ್ನಿಟ್ಟು ನಿರಂತರವಾಗಿ ಅವುಗಳ ಪರಿಹಾರಕ್ಕಾಗಿ ಹೋರಾಡುತ್ತಲೇ ಬಂದಿದೆ. 1980 ರಲ್ಲಿ ಗ್ರಾಮೀಣ ಜನರ ಸಂಕಷ್ಟಗಳು ವಿಕೋಪಕ್ಕೆ ಹೋಗಿ ರೈತರು ತೀವ್ರತರ ಚಳುವಳಿಗಿಳಿದರು. ಅಂದಿನ ಗುಂಡೂರಾಯರ ಕಾಂಗ್ರೆಸ್ ಸರ್ಕಾರ ಬಂದೂಕಿನಿಂದ ರೈತರಿಗೆ ಉತ್ತರ ಕೊಟ್ಟರು. 1983ರ ಚುನಾವಣೆಗಳು ನಡೆದಾಗ ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯವ್ಯಾಪ್ತಿ ರೈತ ವಿರೋಧಿ ಸರ್ವಾಧಿಕಾರಿ ಕಾಂಗ್ರೆಸ್ಸನ್ನು ಸೋಲಿಸಲು ಕರೆ ಕೊಟ್ಟಿತು. ಜನತೆಯ ವಿರೋಧದಿಂದಾಗಿ ಕಾಂಗ್ರೆಸ್ ಅಧಿಕಾರದಿಂದ ಕೆಳಗಿಳಿದು ಜನತಾ ಸರ್ಕಾರ ಅಧಿಕಾರಕ್ಕೆ ಬಂತು.

ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯದ ರೈತರ ಬೇಡಿಕೆಗಳನ್ನು ಪರಿಹರಿಸಲು ಒತ್ತಾಯಿಸಿ ಮನವಿ ಪತ್ರವನ್ನು ಸಲ್ಲಿಸಿತು. ಜನತಾ ಸರ್ಕಾರ ಆ ದಿಕ್ಕಿನಲ್ಲಿ ಸ್ವಲ್ಪ ಪ್ರಯತ್ನ ಮಾಡಿತ್ತು. ಆದರೆ ಭೂಮಿ, ನೀರಾವರಿ, ಸಾಲ, ವಸತಿಯಂತಹ ಸಮಸ್ಯೆಗಳ ಕುರಿತು ಏನೂ ಮಾಡಿಲ್ಲ. ತನ್ನ ಚುನಾವಣೆ ಆಶ್ವಾಸನೆಗಳನ್ನು ಜಾರಿಗೆ ತಂದಿಲ್ಲ. ಮರು ಚುನಾವಣೆಗಳಲ್ಲಿಯೂ ಕಾಂಗ್ರೆಸ್ಸನ್ನು ಸೋಲಿಸಲು ಪ್ರಾಂತ ರೈತ ಸಂಘ ಕರೆಕೊಟ್ಟು ಜನತಾ ಸರ್ಕಾರ ಅಧಿಕಾರಕ್ಕೆ ಮರಳಿ ಬರುವಂತೆ ಸಹಾಯ ನೀಡಲಾಯಿತು.

ಮರು ಆಯ್ಕೆಗೊಂಡ ನಂತರ ರೈತ ಸಂಘಟನೆಗಳ ಜೊತೆ ಮಾತುಕತೆ ಮಾಡುವ ಸೌಹಾರ್ದತೆಯನ್ನು ಕೂಡ ಜನತಾ ಸರ್ಕಾರ ನಿಲ್ಲಿಸಿದೆ. ಕರ್ನಾಟಕ ಪ್ರಾಂತ ರೈತ ಸಂಘಟನೆ ಸಲ್ಲಿಸಿದ ಮನವಿಯ ಕುರಿತು ಚರ್ಚಿಸಲು ಕೂಡ ಮುಂದೆ ಬರುತ್ತಿಲ್ಲ.

ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಯವರಿಗೆ ಮತ್ತೊಮ್ಮೆ ಮನವಿ ಸಲ್ಲಿಸಿ ಪ್ರಯೋಜನವಾಗದೆ ಆಗಸ್ಟ್ 1ರಂದು ಈ ಕೆಳಗಿನ ಹತ್ತು ಬೇಡಿಕೆಗಳನ್ನು ಮುಂದಿಟ್ಟು ತಾಲ್ಲೂಕಾ, ಜಿಲ್ಲಾ ಕೇಂದ್ರಗಳಲ್ಲಿ ರ್‍ಯಾಲಿ, ಪ್ರದರ್ಶನ, ಧರಣಿ ನಡೆಸಲಾಗಿದೆ ಆದಾಗ್ಯೂ ಯಾವ ಪ್ರಯೋಜನವಾಗದ ಕಾರಣ ಮುಂದಿನ ಹಂತದ ಹೋರಾಟವಾಗಿ ಸೆಪ್ಟೆಂಬರ್ 29ರಂದು ವಿಧಾನ ಸೌಧದ ಮುಂದೆ ರೈತರ ಪ್ರದರ್ಶನ ನಡೆಸಲು ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಸಮಿತಿ ಕರೆಕೊಡುತ್ತದೆ.

ಬೇಡಿಕೆಗಳು........

ರಾಜ್ಯ ಸರ್ಕಾರಗಳನ್ನು ನಗರಸಭೆಯಂತೆ ಕಾಣುವ ಕೇಂದ್ರದ ಕಾಂಗ್ರೆಸ್ ಸರ್ಕಾರ, ಅದರಲ್ಲೂ ಕಾಂಗ್ರೆಸ್ಸೇತರ ಸರ್ಕಾರಗಳನ್ನು ಇನ್ನೂ ನಿರ್ಲಕ್ಷಿಸುತ್ತಿದೆ.

ಸ್ವಾತಂತ್ರ್ಯ ನಂತರ ಕೇಂದ್ರ ಸರ್ಕಾರದ ಗುತ್ತೇದಾರಿ ಬಂಡವಾಳಶಾಹಿ-ಭೂ ಮಾಲೀಕ ನೀತಿಯಿಂದಾಗಿ ಗ್ರಾಮೀಣ ಜೀವನ ತೀರಾ ಹದಗೆಟ್ಟು, ಶೇ. 70 ರಷ್ಟು ಬಡವರ ಸಂಖ್ಯೆಯೇರಿದೆ. ಈಗ ಹೊಸ ಆರ್ಥಿಕ ನೀತಿಯ ಹೆಸರಿನಲ್ಲಿ ಕೈಗಾರಿಕಾ ಬಿಕ್ಕಟ್ಟನ್ನು ಗ್ರಾಮೀಣ ದುಡಿಯುವ ಜನರ ಮೇಲೆ ಹಾಕಲಾಗುತ್ತಿದೆ. ಬೆಳೆದ ಮಾಲಿಗೆ ಬೆಲೆಯಿಲ್ಲ, ಸಾಲಗಳ ಸೌಲಭ್ಯವಿಲ್ಲ, ನೀರಾವರಿ ಯೋಜನೆಗಳಿಲ್ಲ, ಭೂಸುಧಾರಣೆಯಿಲ್ಲ. ಕೈಗಾರಿಕಾ ವಸ್ತುಗಳ ಬೆಲೆ, ತೆರಿಗೆ, ಇತರ ಬೆಲೆಗಳನ್ನು ಗಗನಕ್ಕೇರಿಸಲಾಗುತ್ತಿದೆ ಹೀಗಾಗಿ ಕೃಷಿ ಕೂಲಿಗಾರರಿಂದ ಶ್ರೀಮಂತ ರೈತರವರೆಗೆ ಗಂಭೀರ ಪರಿಸ್ಥಿತಿಯನ್ನು ಎದುರಿಸುವಂತಾಗಿದೆ ಇಂತಹ ಪರಿಸ್ಥಿತಿಯಲ್ಲಿ ವಿಶಾಲ ಹೋರಾಟಗಳನ್ನು ನಡೆಸಿದೆ ರೈತಾಪಿ ಜನತೆ ತಮ್ಮ ಹಕ್ಕನ್ನು, ಜೀವನ ಮಟ್ಟವನ್ನು ರಕ್ಷಣೆ ಮಾಡಿಕೊಳ್ಳಲಾಗುವಂತಿಲ್ಲ.

ಈ ಹಿನ್ನೆಲೆಯಲ್ಲಿ ಅಖಿಲ ಭಾರತ ಕಿಸಾನ್ ಸಭಾ ರಾಷ್ಟ್ರವ್ಯಾಪಿಯಾಗಿ ಹೋರಾಟ ನಡೆಸುತ್ತಿದ್ದು ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯ ಮಟ್ಟದಲ್ಲಿ ಜನತಾ ಸರ್ಕಾರ ತನ್ನ ಅಧಿಕಾರಾವಧಿಯಲ್ಲಿರುವ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಲು ಹಾಗೂ ಕೇಂದ್ರ ಸರ್ಕಾರ ರೈತರ ಸಮಗ್ರ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಲು ಹಾಗೂ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಬೆಳೆಸಲು ಹೋರಾಟ ನಡೆಸುತ್ತಿದೆ.

29-9-86 ರಂದು ರಾಜ್ಯದ ಸಮಗ್ರ ಬೇಡಿಕೆಗಳನ್ನು ಒತ್ತಾಯಿಸಲು ಭಾರಿ ಸಂಖ್ಯೆಯಲ್ಲಿ "ವಿಧಾನ ಸೌಧ ಚಲೋ" ಕಾರ್ಯಕ್ರಮದಲ್ಲಿ ಭಾಗವಹಿಸಲು ರಾಜ್ಯದ ರೈತರಿಗೂ. ಕಾರ್ಮಿಕರಿಗೂ ಕರೆ ಕೊಡಲಾಗಿದೆ.

ಹೆಚ್ಚುತ್ತಿರುವ ಮತೀಯ ಗಲಭೆ ಅದಕ್ಕೆ ಕಾರಣಗಳು

ಜಾತ್ಯಾತೀತ ರಾಷ್ಟ್ರದ ಕಲ್ಪನೆಯಲ್ಲಿರುವ ತಪ್ಪು ನಿವಾರಣೆಯಾಗಬೇಕು :

ಜಾತ್ಯಾತೀತ ರಾಷ್ಟ್ರವೆಂದರೆ "ರಾಷ್ಟ್ರದ ಚಟುವಟಿಕೆಗಳನ್ನು ಜಾತೀಯ ಮತೀಯ ಸಂಸ್ಥೆಗಳಿಂದ ಪ್ರತ್ಯೇಕವಾಗಿ ಅವುಗಳ ಯಾವುದೇ ಪ್ರಭಾವಕ್ಕೊಳಗಾಗದೆ, ನಡೆಸಿಕೊಂಡು ಹೋಗುವುದು. ಅಂದರೆ, ಕಾಂಗ್ರೆಸ್ ಪಕ್ಷವು ಈತನಕ ಅರ್ಥೈಸಿಕೊಂಡು ಬಂದಂತೆ, "ಎಲ್ಲಾ ಜಾತಿಮತಗಳಿಗೆ ಎಲ್ಲಾ ರೀತಿಯ ಪ್ರೋತ್ಸಾಹ ನೀಡಿ ರಾಷ್ಟ್ರದ ಚಟುವಟಿಕೆಗಳೊಡನೆ ಈ ಮೂಢತನಗಳನ್ನೆಲ್ಲಾ ಅವಿಭಾಜ್ಯವಾಗಿ ಬೆರೆಸುವುದು" ಎಂಬುದಂತೂ ಖಂಡಿತವಾಗಿ ಅಲ್ಲ.

"ಜಾತ್ಯಾತೀತತೆ" ಒಂದು ಪ್ರಜಾಪ್ರಭುತ್ವ ಕಲ್ಪನೆ. ಪಾಳೆಯಗಾರಿ ಸಮಾಜ ವ್ಯವಸ್ಥೆಯಿಂದ ಬಂಡವಾಳಶಾಹಿ ವ್ಯವಸ್ಥೆ ಬೆಳೆಯುತ್ತಾ ಬಂದಾಗ ಪಾಳೆಯಗಾರಿ ಮೌಲ್ಯಗಳ ವಿರುದ್ಧ ನಡೆದ ಹೋರಾಟದ ಫಲಶ್ರುತಿ ಈ ಜಾತ್ಯಾತೀತತೆ.

ಧಾರ್ಮಿಕ ಸಂಸ್ಥೆಗಳ ಮಠಗಳ ಹಿಡಿತದಲ್ಲಿತ್ತು, ವಿದ್ಯಾಭ್ಯಾಸ, ನ್ಯಾಯಪೀಠಗಳು, ನಾಗರೀಕರ ಒಳಿತು ಕೆಡಕು ಇವೆಲ್ಲವೂ, ಸಮಾಜವನ್ನು ಧಾರ್ಮಿಕ ಮಠಗಳ ಹಿಡತದಿಂದ ಬಿಡುಗಡೆ ಮಾಡುವುದರ ಫಲ ಜಾತ್ಯಾತೀತತೆ.

ನಮ್ಮ ದೇಶದಲ್ಲಿ ಅದರ ಸ್ವರೂಪವೇ ವಿಕೃತವಾಯಿತು. ಚುನಾವಣಾ ದೃಷ್ಟಿ ಮತ್ತು ಭಾರತೀಯ ಬಂಡವಾಳಗಾರರು ಪಾಳೆಗಾರಿ ಶಕ್ತಿಗಳೊಡನೆ ಆಳಲು ಹೊರಟಿರುವುದು ಈ ವಿಕೃತ ಸ್ಥಿತಿಗೆ ಕಾರಣ. ಕಾಂಗ್ರೆಸ್ ಮತ್ತು ಇತರ ಭೂಮಾಲಿಕ ಬಂಡವಾಳಶಾಹಿ ಪಕ್ಷಗಳು ಜಾತ್ಯಾತೀತತೆಯ ಪರಿಕಲ್ಪನೆಯನ್ನೂ ವಿಕೃತಗೊಳಿಸಿರುವುದರ ಫಲ ಇಂದು ದೇಶದ ಐಕ್ಯತೆ ಸಮಗ್ರತೆಗೆ ಒದಗಿ ಬಂದಿರುವ ಬೃಹದಾಕಾರದ ಅಪಾಯ.

2. ಹೊರ ದೇಶಗಳಿಂದ ಸುರಿಯುತ್ತಿರುವ ಸಾವಿರ ಸಾವಿರ ಕೋಟಿ ಹಣ :

ಹೊರದೇಶಗಳ ಕೆಲವು ನಿರ್ದಿಷ್ಟ ಮೂಲಗಳಿಂದ ಸಾವಿರ ಸಾವಿರ ಕೋಟಿಗಟ್ಟಲೇ ಹಣ ನಮ್ಮ ದೇಶದ ಖಾಸಗಿ ಗುಂಪುಗಳಿಗೆ ಹರಿದು ಬರುತ್ತಿದೆ ಎಂಬುದು ಎಲ್ಲರಿಗೂ ತಿಳಿದ ವಿಷಯ ಸರಕಾರಕ್ಕಂತೂ ಚೆನ್ನಾಗಿ ಗೊತ್ತಿದ್ದ ವಿಷಯ. ಈ ಹಣದಲ್ಲಿ ಬಹಳಷ್ಟು ಭಾಗ ಎಲ್ಲಾ ಜಾತೀಯ ಹಿಂದು, ಮುಸ್ಲಿಂ, ಕ್ರೈಸ್ತ-ಮೂಲಭೂತವಾದಿಗಳ ಕೈ ಸೇರಿರುವುದು ಎಂಬುದು ತಿಳಿದುಬರುತ್ತದೆ.

ಈ ಹಣ ಯಾವ ರೀತಿಯಲ್ಲಿ ಖರ್ಚಾಗುತ್ತಿದೆ? ಚರ್ಚು, ಮಸೀದಿ, ದೇವಸ್ಥಾನಗಳನ್ನು ಪುನರುಜ್ಜೀವನ ಮಾಡುವುದಕ್ಕೆ, ದೇಶದ ಮೂಲೆ ಮೂಲೆಗಳಲ್ಲಿ ಈ ಮತೀಯ ಸಂಸ್ಥೆಗಳನ್ನು ಹೊಸದಾಗಿ ಕಟ್ಟಲು ಮತ್ತು ಈ ಹಳೆಯ ಹೊಸ ಮತೀಯ ಸಂಸ್ಥೆಗಳ ಸುತ್ತ ಯುವಕರ, ವಿದ್ಯಾರ್ಥಿಗಳ, ದುಡಿಯುವ ಜನರನ್ನು ಸೆಳೆದು ಪರಸ್ಪರ ಕಾದಾಟಕ್ಕೆ ಹಚ್ಚುವುದಕ್ಕೆ ಈ ಹಣ ಖರ್ಚಾಗುತ್ತದೆ.

3. ಕಾಳಸಂತೆ ಕೋರರು, ಸಟ್ಟಾ ವ್ಯಾಪಾರಿಗಳು ಇತ್ಯಾದಿ :

ಭಾರತದಲ್ಲಿ ಎಲ್ಲೆಡೆ ಕಾಣುತ್ತಿರುವ ಹಣದಲ್ಲಿ ಅರ್ಧ ಅರ್ಧ ಕಪ್ಪುಹಣ ಎಂಬುವುದು ಸರ್ವವಿಧಿತ. ಸರಕಾರ ಈ ಕಪ್ಪು ಹಣ ಬೆಳೆಯುತ್ತಿರುವುದರ ಬಗ್ಗೆ ಕಣ್ಣು ಮುಚ್ಚಿ ಕುಳಿತಿದೆ.

ಎಲ್ಲಿಯಾದರೂ ಕೆಲವೊಮ್ಮೆ ಅಪ್ಪಿತಪ್ಪಿ ಪ್ರಾಮಾಣಿಕ ಸರಕಾರಿ ಅಧಿಕಾರಿಗಳು ಅಥವಾ ಜನರ ಕಣ್ಣಿಗೆ ಮಣ್ಣೆರಚುವುದಕ್ಕೆ ಒಬ್ಬೊಬ್ಬ ಮಂತ್ರಿವರ್ಯರು ಕಪ್ಪು ಹಣದ ವಿರುದ್ಧ ಕಠಿಣ ಕ್ರಮ ಕೈಗೊಂಡರೆ ಈ ಶಕ್ತಿಗಳು ಜಾತೀಯ ಮತೀಯ ಗಲಭೆಗಳನ್ನು ಕೆದರಿ ಸರಕಾರಗಳನ್ನು ನಡುಗಿಸಲು ಪ್ರಯತ್ನಿಸುತ್ತಾರೆ.

ಪ್ರಜಾ ಪ್ರಭುತ್ವಕ್ಕಾಗಿ ನಡೆಸುವ ನಮ್ಮ ಹೋರಾಟ ಈ ಎಲ್ಲಾ ಶಕ್ತಿಗಳ ವಿರುದ್ಧ ಸಿಡಿದೆದ್ದು ಜಾತಿ ಮತಗಳನ್ನು ಮೀರಿದ್ದ ಜನರದಿನನಿತ್ಯ-ಅಗತ್ಯಗಳಿಗಾಗಿ ಹೋರಾಡುವ ಸಮರಧೀರ ಸಂಘಟನೆಗಳನ್ನು ಕಟ್ಟುವ ಮೂಲಕ ಪ್ರಜಾಸತ್ತಾತ್ಮಕ ಚಳುವಳಿಯನ್ನು ಬೆಳೆಸುವುದೊಂದೆ ಮದ್ದು.

ಶಾಂತಿ ವರ್ಷದಲ್ಲಿ ಏನು ನಡೆದಿದೆ ?

(ಐದನೇ ಪುಟದಿಂದ)

2 (SALT|2) ಇವೆರಡನ್ನೂ ತಾನು ಪಾಲಿಸುವುದಿಲ್ಲ ಎಂದು ಅಮೇರಿಕಾ ಹೇಳಲಾರಂಭಿಸಿದೆ.

ಇವೆಲ್ಲದಕ್ಕೆ ಮುಕುಟಮಣಿಯಂತೆ ಇರುವುದು ಅಬ್ಯಾದ ಮೇಲೆ ಬರ್ಬರ ಬಾಂಬುದಾಳಿ ಇದು ಅಂತರರಾಷ್ಟ್ರೀಯ ಶಾಂತಿವರ್ಷಕ್ಕೆ ಸಾಮ್ರಾಜ್ಯಶಾಹಿಗಳ ದೊಡ್ಡ "ಬಳುವಳಿ" ನಿಕಾರವಾದಲ್ಲಿ, ಆಫ್ಘಾನಿಸ್ತಾನದ ವಿರುದ್ಧ ಭಯೋತ್ಪಾದಕ ಚಟುವಟಿಕೆ ಹೆಚ್ಚಿಸಲು ಸಿ.ಐ.ಎ. ಮೂಲಕ. ಮಿಲಿಯ ಗಟ್ಟಲೆ ಡಾಲರುಗಳನ್ನು ಸುರಿಯುತ್ತಿರುವವರು, ದಕ್ಷಿಣ ಆಫ್ರಿಕಾದ ವರ್ಣದ್ವೇಷಿ ಬಿಳಿಯ ಸರ್ಕಾರನ್ನೂ ಸಮಸ್ತ ಜಗತ್ತೇ ಖಂಡಿಸುತ್ತಿದ್ದರೂ ಏನೇನೋ ಕುಂಟು ನೆಪವೊಡ್ಡಿ ರಕ್ಷಿಸುತ್ತಿರುವವರು ಯಾರು ಎಂಬುದಂತೂ ಎಲ್ಲರಿಗೂ ತಿಳಿದ ವಿಷಯ.

ರೈತ ಕಾರ್ಯಕರ್ತರ ತರಬೇತಿ ಶಿಬಿರ

ಆಗಸ್ಟ್ 17 ರಿಂದ 21ರವರೆಗೆ ಐದು ದಿನ ಕಾಲ ಸುಮಾರು 87 ಮಂದಿ ರೈತ ಮುಖಂಡರಿಗೂ ಕಾರ್ಯಕರ್ತರಿಗೂ ಕರ್ನಾಟಕ ಪ್ರಾಂತ ರೈತ ಸಂಘದ ಆಶ್ರಯದಲ್ಲಿ "ಶಾಲೆ" ನಡೆಯಿತು. 15 ಜಿಲ್ಲೆಗಳಿಂದ ಕಾರ್ಯಕರ್ತರು ಬಂದಿದ್ದರು.

5 ದಿನ ನಡೆದ ಈ ರಾಜ್ಯ ಮಟ್ಟದ ಶಾಲೆಯಲ್ಲಿ ಕಾ. ಪಿ. ರಾಮಚಂದ್ರ ರಾವ್‌ರವರು ಅಖಿಲ ಭಾರತ ಕಿಸಾನ್ ಸಭೆಯ, ರೈತ ಧೋರಣೆಯ ಬೆಳವಣಿಗೆ ಹಾಗೂ ರೈತರ ಪ್ರಮುಖ ಹೋರಾಟಗಳ ಬಗ್ಗೆ ಉಪನ್ಯಾಸ ನೀಡಿದರೆ ಕಾಂ. ಚಂದ್ರಶೇಖರಬಾಳೆಯವರು ಸಂಘಟನೆ ಹಾಗೂ ಸಂವಿಧಾನದ ಬಗ್ಗೆ ಕಾ ನಾಗರಾಜ್ ಕರ್ನಾಟಕದ ಕೃಷಿ ಸಂಬಂಧಗಳ ಬಗ್ಗೆ ಉಪನ್ಯಾಸ ನೀಡಿದರು.

ಒಂದು ಮತ್ತು ಎರಡನೆಯ ಉಪನ್ಯಾಸದ ವಿವರಣೆಗಳು : ಅಖಿಲ ಭಾರತ ಕಿಸಾನ್ ಸಭಾದ ಧ್ಯೇಯ ಧೋರಣೆಗಳು.

3ನೇ ಉಪನ್ಯಾಸದ ವಿವರಗಳು : ಅಖಿಲ ಭಾರತ ಕಿಸಾನ್ ಸಭೆಯ ಪ್ರಜಾಸತ್ತಾತ್ಮಕವಾದ ಸಂವಿಧಾನದ ಅಂಗೀಕಾರ ; ಅದರ ವಿವಿಧ ಮಟ್ಟಗಳ ಸಮಿತಿಗಳು

4 ನೇ ಉಪನ್ಯಾಸದ ವಿವರಗಳು : 19 ನೇ ಶತಮಾನದಲ್ಲಿ ನಡೆದ ಸಂತಾ ಹೋರಾಟಗಳು ಮತ್ತು ನೀಲಿ ಬೆಳೆಗಾರರ ಹೋರಾಟಗಳು ; 20ನೇ ಶತಮಾನದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ನಡೆದ ದಂಗೆಗಳು

5 ನೇ ಉಪನ್ಯಾಸದ ವಿವರಗಳು ; ಮೂರು ಹಂತಗಳಲ್ಲಿ ಕರ್ನಾಟಕ ಕೃಷಿಯಲ್ಲಿ ಬಂಡವಾಳ ಶಾಹಿ ಬೆಳವಣಿಗೆಗಳು ಹಾಗೂ ಇದರ ಪರಿಣಾಮ.

Printed & Published by P. Ramachandra Rao on behalf of the Communist rxist] Party of India [Ma]Karnataka State Committe, K. V. Temple Street, Sultanpet, Bangalore-560053 Editorial and manageriel office: L-56, K. V. Temple Street, Sultanpet B-53 Phone : 75331 Editor P. Ramachandra Rao Managing Editor : N. K. Upadhyaya